ಈ ಯೋಜನೆಯು ಇಂಡಿಯಾ ಫೌಂಡೇಷನ್ ಆಫ್ ಆರ್ಟ್ಸ್‌ರವರ ಸಹಕಾರದಿಂದ 560 ಕಾರ್ಯಕ್ರಮದ ಅಡಿ ಸಾಧ್ಯವಾಗಿದೆ

# ಬೆವರು

ಮೇ 2020
ಬೆಂಗಳೂರು

5 ರುಪಾಯಿ

**ಪ್ರೀತಿ, ಘನತೆ, ಹೋರಾಟ**

**ಮನೆಕೆಲಸದವರ, ಪೌರಕಾರ್ಮಿಕರ, ಉಡುಪು ಕೆಲಸಗಾರರ ಮತ್ತು ಬೀಡಿ ಕಾರ್ಮಿಕರ ಸಹಯೋಗದಿಂದ**

VOL. 5



# ವಲಸೆ ಕಾರ್ಮಿಕರ ನಗರಕ್ಕೆ ಸ್ವಾಗತ/ ನಗರಕ್ಕೆ ಅರಿವಿಲ್ಲ:

## ಕಾರ್ಮಿಕರ ಸಮೂಹ ಮಾತನಾಡುತ್ತದೆ

**“700 ಕಾರ್ಮಿಕರೇ? ನಿಜವಾಗಿಯೂ? ಸಂಖ್ಯೆಯೊಂದೇ ಭಯಾನಕವಾಗಿದೆ.”**

ಇದು ಕಳೆದ ಕೆಲವು ವಾರಗಳ ಕೋವಿಡ್ 19 ಲಾಕ್ಡೌನ್ ಸಮಯದಲ್ಲಿ, ಹಲವಾರು ಸರ್ಕಾರಿ ಅಧಿಕಾರಿಗಳ ಪ್ರತಿಕ್ರಿಯೆ. ನಗರದಲ್ಲಿನ ವಲಸೆ ಕಾರ್ಮಿಕರ ಸಂಖ್ಯೆಯು ರಾಜ್ಯ, ಟ್ರೇಡ್ ಯೂನಿಯನ್ ಮತ್ತು ಸಾರ್ವಜನಿಕರನ್ನು ಆಶ್ಚರ್ಯಚಕಿತಗೊಳಿಸಿದೆ. ನಗರದಲ್ಲಿನ ಲಾಕ್ಡೌನ್ನಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಕಾರ್ಮಿಕರು ಕೆಲಸ ಮತ್ತು ವೇತನವಿಲ್ಲದೆ ಸಿಲುಕಿಕೊಂಡಿದ್ದಾರೆ. ಇದಕ್ಕೆ ಪ್ರತಿಕ್ರಿಯೆಯಾಗಿ, ಕಾರ್ಮಿಕ ಇಲಾಖೆ, ಬಿಬಿಎಂಪಿ ಮತ್ತು ಪೊಲೀಸರು ಮಿಶ್ರ ಫಲಿತಾಂಶಗಳೊಂದಿಗೆ ಆಹಾರ ಪೂರೈಕೆ ಮತ್ತು ರೇಷನ್ ವಿತರಣೆಯ ಕೆಲಸವನ್ನು ಮಾಡುವಲ್ಲಿ ಅತ್ಯುತ್ತಮ ಪ್ರಯತ್ನವನ್ನು ಮಾಡುತ್ತಿದ್ದಾರೆ.

ನಗರದ ಅತಿದೊಡ್ಡ ಮೂಲಸೌಕರ್ಯ ಯೋಜನೆಗಳಲ್ಲಿ ಒಂದಾದ ಬೆಂಗಳೂರು ಮೆಟ್ರೋವನ್ನು ನಿರ್ಮಿಸುವ ಸುಮಾರು 9,000 ವಲಸೆ ಕಾರ್ಮಿಕರಿದ್ದಾರೆ. ಮರಾ ಬಿಡುಗಡೆ ಮಾಡಿದ ವರದಿಯಲ್ಲಿ, ಕಾರ್ಮಿಕರ ಅನಿಶ್ಚಿತ ಜೀವನ ಮತ್ತು ಕೆಲಸದ ಸ್ಥಿತಿಗತಿಗಳನ್ನು ಬಹಿರಂಗಪಡಿಸಲಾಗಿದೆ. ಮೆಟ್ರೋದಲ್ಲಿ ಕೆಲಸ ಮಾಡುವ ಕಾರ್ಮಿಕರ ಬಗ್ಗೆ ಯಾವುದೇ ಡೇಟಾವನ್ನು ಹಂಚಿಕೊಳ್ಳಲು ಬಿಎಂಆರ್ಸಿಎಲ್ ನಿರಾಕರಿಸಿದೆ. ಕೋವಿಡ್ 19 ಬಿಕ್ಕಟ್ಟಿನಿಂದ ಕಳೆದ ದಶಕದಿಂದಲೂ ನಡೆಯುತ್ತಿರುವ ಮೆಟ್ರೋ ಕಾರ್ಮಿಕರ ಶೋಷಣೆಯನ್ನು ಬಹಿರಂಗಪಡಿಸುವ ಅವಕಾಶವೊಂದು ನಮಗೆ ದೊರಕಿದೆ.

“ನಾವು ಇಲ್ಲಿಗೆ ಕೆಲಸ ಮಾಡಲೆಂದಷ್ಟೇ ಬಂದಿದ್ದೇವೆ. ಸರ್ಕಾರವು ನಮಗೇನು ಸಹಾಯ ಮಾಡುತ್ತಿಲ್ಲ. ಒಂದೇ ಒಂದು ದಿನ ಕೆಲಸ ಮಾಡದಿದ್ದರೂ ಒಂದು ರುಪಾಯಿಯನ್ನು ನಮಗೆ ನೀಡುವುದಿಲ್ಲ. ನಾವು ಕೇಳುವುದಿಷ್ಟೇ - ನಾವು ಮಾಡಿದ ಕೆಲಸಕ್ಕೆ ಸಂಬಳ ನೀಡಬೇಕೆಂದು.”

ಇದರ ನಡುವೆ, ನಗರದ ಹಲವಾರು ನಿರ್ಮಾಣ ತಾಣಗಳಲ್ಲಿ, ಇದೇ ರೀತಿಯ ಕಥೆ ತೆರೆದುಕೊಳ್ಳುತ್ತದೆ. ಲಾಕ್ಡೌನ್ ಪ್ರಾರಂಭವಾದಾಗಿನಿಂದ, ಕಾರ್ಮಿಕರು ನಗರದಲ್ಲಿನ ತಮ್ಮ ಏಕೈಕ ಸಂಪರ್ಕವಾದ ಗುತ್ತಿಗೆದಾರರು ಮತ್ತು ಮಾಲೀಕರನ್ನು ತಲುಪಲು ಪ್ರಯತ್ನಿಸುತ್ತಿದ್ದಾರೆ. ಹೆಚ್ಚಿನ ಮಾಲೀಕರು ಮತ್ತು ಗುತ್ತಿಗೆದಾರರು ತಮ್ಮ ಫೋನ್ಗಳನ್ನು ಸ್ವಿಚ್ ಆಫ್ ಮಾಡಿ ಪರಾರಿಯಾಗಿದ್ದಾರೆ. ಇನ್ನು ಕೆಲವರು ರೇಷನ್ನಾಗಿ ಸಿದ್ಧತೆ ನಡೆಸಿದ್ದು, ಇದರ ಖರ್ಚನ್ನು ತಮ್ಮ ವೇತನದಿಂದ ಕಡಿಯುತ್ತಾರೆ ಎಂದು ಕಾರ್ಮಿಕರಿಗೆ ಅರಿವಿದೆ.


“ನಮ್ಮ ದೇಹವು ಕೆಲಸ ಮಾಡಲು ಒಗ್ಗಿಕೊಂಡಿದೆ. ನಾವು ಕಷ್ಟಪಟ್ಟು ಕೆಲಸ ಮಾಡುತ್ತೇವೆ, ನಾವು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆ ಮತ್ತು ಅದಕ್ಕೆ ಸಂಬಳ ಪಡೆಯುವುದು ನಮ್ಮ ಹಕ್ಕಾಗಿದೆ . ದಿನಕ್ಕೆ ಎರಡು ಹೊತ್ತು ಊಟವನ್ನು ಕೇಳುವುದು ನಮಗೆ ಇಷ್ಟವಿಲ್ಲ.”

ದಿನಗೂಲಿ ಕಾರ್ಮಿಕರ ಪರಿಸ್ಥಿತಿ ಇನ್ನೂ ಹದಗೆಟ್ಟಿದೆ. "ನನ್ನ ಬಳಿ ಕೇವಲ 2000 ಸಾವಿರ ರುಪಾಯಿಯಿದ್ದು, ಅದನ್ನು ವೈದ್ಯಕೀಯ ತುರ್ತು ಪರಿಸ್ಥಿತಿಗಾಗಿ ಉಳಿಸಿಟ್ಟಿದ್ದೇನೆ" ಎಂದು ನಗರದ ಐಟಿ ಆವರಣವಾದ ಮಹಾದೇವಪುರದಲ್ಲಿ ಚರಂಡಿಯ ಪಕ್ಕ ವಾಸ ಮಾಡುವ ತ್ಯಾಜ್ಯ ಆರಿಸುವವರೊಬ್ಬರು ಹಂಚಿಕೊಂಡಿದ್ದಾರೆ. ಸರ್ಕಾರದ ಹೊಣೆಗಾರಿಕೆಯ ಕೊರತೆಯಿಂದಾಗಿ, ಕಾರ್ಮಿಕರು ತಾತ್ಕಲಿಕವಾಗಿ ರೇಷನ್ ವಿತರಣೆ ಮಾಡಲು ಪ್ರಯತ್ನಿಸುವ ಸಂಸ್ಥೆಗಳ ಮತ್ತು ಅಪರಿಚಿತರ ದಾನದ ಮೇಲೆ ಅವಲಂಬಿತರಾಗಿದ್ದಾರೆ.

ತಾತ್ವಿಕವಾಗಿ, ಆಹಾರ ಮತ್ತು ರೇಷನ್ ವಿತರಣೆಯ ಜವಾಬ್ದಾರಿಯು ಕಾರ್ಮಿಕ ಇಲಾಖೆಯದ್ದಾಗಿದ್ದು, ಈ ಕಾರ್ಯವನ್ನು ಬಿಬಿಎಂಪಿ ಮತ್ತು ಟ್ರೇಡ್ ಯೂನಿಯನ್ಗಳ ಜೊತೆಯಲ್ಲಿ ಮಾಡಬೇಕಾಗಿರುವುದು. ವಾಸ್ತವದಲ್ಲಿ, ಈ ವ್ಯವಸ್ಥೆಯು ವಲಸೆ ಕಾರ್ಮಿಕರ ಅಗತ್ಯಗಳನ್ನು ಬಗೆಹರಿಸಲಾಗುತ್ತಿಲ್ಲ. ನಗರದ ಸಹಾಯ ಮತ್ತು ಸೇವಾ ಕಾರ್ಯವಿಧಾನವನ್ನು ಪಡೆಯಲು ಎಲ್ಲಾ ವಲಸೆ ಕಾರ್ಮಿಕರ ಬಳಿ ಬ್ಯಾಂಕ್ ಖಾತೆಗಳು, ರೇಷನ್ ಕಾರ್ಡ್ಗಳು ಅಥವಾ ಇತರೆ ಡಾಕ್ಯುಮೆಂಟ್ಗಳಿಲ್ಲ. ಹೆಚ್ಚಿನ ವಲಸೆ ಕಾರ್ಮಿಕರು ಯಾವುದೇ ಯೂನಿಯನ್‌ನಲ್ಲಿ ನೋಂದಣಿಯಾಗಿಲ್ಲ, ದಶಕಗಳ ಕಾಲ ಖಾಸಗೀಕರಣ, ಹಕ್ಕು ನಿರಾಕರಣೆ, ರಾಜಕೀಯ, ಮಧ್ಯಮ ವರ್ಗ ಮತ್ತು ಮಾಧ್ಯಮಗಳಿಂದ ದೂಷಣೆಯನ್ನು ಎದುರಿಸಿ ಹೋರಾಡಿದ್ದಾರೆ. ಅನೌಪಚಾರಿಕ ಕಾರ್ಮಿಕರಿಗೆ ಆದ್ಯತೆ ನೀಡುವ ಜಾಗತಿಕ ಹಣಕಾಸು ವ್ಯವಸ್ಥೆಯಂತೆ ಹೆಚ್ಚಿನ ವಲಸೆ ಕಾರ್ಮಿಕರು ತಮ್ಮ ಚಲನಶೀಲತೆ, ಉದ್ಯೋಗ ಸುರಕ್ಷತೆ ಮತ್ತು ಅನಾಮಧೇಯತೆಯನ್ನು ಬಯಸುತ್ತಾರೆ. ನಿರುದ್ಯೋಗ ಮತ್ತು ಕೃಷಿ ಬಿಕ್ಕಟ್ಟನ್ನು ಎದುರಿಸುವಾಗ, ಅಪರಿಚಿತ ನಗರದಲ್ಲಿ ತಮ್ಮ ಹಕ್ಕುಗಳಿಗಾಗಿ ಹೋರಾಡುವಾಗ, ಕಾರ್ಮಿಕರು ಕೆಲಸವೆಲ್ಲಿರುತ್ತದೆಯೋ ಅಲ್ಲಿಗೆ ವಲಸೆ ಹೋಗಬಯಸುತ್ತಾರೆ. ಒಕ್ಕೂಟಗಳು ವಲಸೆ ಕಾರ್ಮಿಕರನ್ನು ತಮ್ಮ ಪ್ರಭಾವದ ಬಳಗದಲ್ಲಿ ಸಂಯೋಜಿಸಲು ಪ್ರಯತ್ನ ಮಾಡಿದರೂ, ವಲಸೆ ಕಾರ್ಮಿಕರನ್ನು ನೋಂದಾಯಿಸುವ ಕಾರ್ಯದಲ್ಲಿ ಅಸಫಲರಾಗಿದ್ದಾರೆ.

ಸ್ಥಳೀಯ ಉದ್ವಿಗ್ನತೆಗಳು, ಜಾತಿವಾದ ಮತ್ತು ಕೋಮುವಾದೀಕರಣವು ಗಾಢವಾಗುತ್ತಲೇ ಇದ್ದು, ಎಲ್ಲಾ ರೀತಿಯ ಪರಿಹಾರ ಕಾರ್ಯಗಳ ಮೇಲೆ ಪರಿಣಾಮ ಬೀರುತ್ತಿದೆ. ಸ್ಥಳೀಯ ಭಾಷೆಯನ್ನು ಮಾತನಾಡದವರನ್ನು ಅಥವಾ ಆಡು ಭಾಷೆಯಲ್ಲಿ ಮಾತನಾಡುವವರನ್ನು ನಿರ್ಲಕ್ಷಿಸಲಾಗಿದ್ದು, ಆಹಾರ / ಪಡಿತರವನ್ನು ನಿರಾಕರಿಸಲಾಗುತ್ತಿದೆ. ಪರಿಹಾರವನ್ನು ಪ್ರಾಥಮಿಕವಾಗಿ ಎಮ್.ಎಲ್. ಎಗಳು ತಮ್ಮ ಮತದಾರರ ಕ್ಷೇತ್ರಗಳಲ್ಲಿ ಮಾತ್ರ ವಿತರಿಸುವ ಸಂದರ್ಭಗಳಿವೆ. ಕೆಲವು ಕಾರ್ಮಿಕರು 'ಉಚಿತ' ರೇಷನ್ನಾಗಿ ದುಡ್ಡು ಕಟ್ಟಬೇಕಾಗಿದೆ. ಬೆಂಗಳೂರಿನ ಕಾರ್ಮಿಕರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮರಿದ್ದಾರೆ. ಸ್ಥಳೀಯ ಟಿವಿ ಚಾನೆಲ್ಗಳ ಗಮನ ಮತ್ತು ಪರಿಹಾರ ಕಾರ್ಯಗಳಲ್ಲಿನ ಪ್ರಯತ್ನಗಳು ಸಾಂಕ್ರಾಮಿಕ ರೋಗದ ಬಗ್ಗೆ ಕಡಿಮೆ, ಬದಲಿಗೆ ದ್ವೇಷ ಮತ್ತು ಹಿಂಸಾಚಾರವನ್ನು ಹರಡುವ ಬಗ್ಗೆ ಪ್ರಸಾರ ಮಾಡುತ್ತಿವೆ. "ಕರೋನಾ ವೈರಸ್ ನಮ್ಮ ಮೇಲೆ ಪರಿಣಾಮ ಬೀರುವುದಿಲ್ಲ. ಅದಕ್ಕಿಂತ ದೊಡ್ಡ ವೈರಸ್ ಜಾತಿ ಮತ್ತು ಧರ್ಮ. ಆ ವೈರಸ್ ಹರಡುವುದನ್ನು ನಿಯಂತ್ರಿಸಲು ನೀವು ಯಾಕೆ ಏನು ಮಾಡುತ್ತಿಲ್ಲ. ಇದು ಎಲ್ಲಕ್ಕಿಂತ ಹೆಚ್ಚು ಅಪಾಯಕಾರಿ" ಎಂದು ದೆಹಲಿಯ ಗಲಭೆಯನ್ನು ಶಿವ ವಿಹಾರದಿಂದ ಅನುಸರಿಸುತ್ತಿದ್ದ ಕಾರ್ಮಿಕರೊಬ್ಬರು ಹೇಳಿದರು. ಎಸ್ಸಿ / ಎಸ್ಟಿ ಸಮುದಾಯಗಳಿಂದ ವಲಸೆ ಬಂದ ಕಾರ್ಮಿಕರ ಕಡೆಗೆ ಅಸ್ಪೃಶ್ಯತೆ ಮತ್ತು ತಾರತಮ್ಯದ ಅಭ್ಯಾಸಗಳನ್ನು ವೈರಸ್ ಮತ್ತಷ್ಟು ಉಲ್ಬಣಗೊಳಿಸಿದೆ. "ಅವರು ನಮ್ಮ ಬೀದಿಗೆ ಬರುವುದಿಲ್ಲ, ಅವರು ತಮ್ಮ ಜಾತಿಯ ಜನರು ವಾಸಿಸುವ ಗಲ್ಲಿಗಳಲ್ಲಿ ಮಾತ್ರ ಆಹಾರವನ್ನು ವಿತರಿಸುತ್ತಾರೆ."

"ನಮ್ಮ ಕೊಠಡಿಗಳು ತುಂಬಾ ಚಿಕ್ಕದಾಗಿವೆ. ಯಾವುದೇ ಫ್ಯಾನ್ಗಳಿಲ್ಲ, ಮತ್ತು ಈ ದಿನಗಳಲ್ಲಿ ಬಿಸಿಲಿನ ಬೇಗೆ ಹೆಚ್ಚಾಗಿದೆ. ಸೂರ್ಯನ ಕಿರಣಗಳಿಂದ ಟಿನ್ ಛಾವಣಿ ಬಿಸಿಯಾಗುತ್ತದೆ. ನಾವು ಒಳಗೆ ಬೆಂದು ಹೋದಂತೆ ಅನಿಸುತ್ತದೆ" ಈ ರೀತಿಯ ಜೀವನ ಪರಿಸ್ಥಿತಿಗಳಲ್ಲಿ, ಸೋಷಿಯಲ್ ಡಿಸ್ಟೆನ್ಸ್‌ಗೆ ಯಾವ ಅವಕಾಶವಿದೆ? ನೀರು ಸರಬರಾಜು ಇಲ್ಲದ ಸ್ಥಳಗಳಲ್ಲಿ, ನಾವು ಪ್ರಧಾನಮಂತ್ರಿಯ ಮನವಿಯನ್ನು ಹೇಗೆ ಅನುಸರಿಸಲಾಗುತ್ತದೆ? ಕಾರ್ಮಿಕರು ದಿನಕ್ಕೆ ಒಂದು ಹೊತ್ತಿನ ಊಟಕ್ಕೆ ಹೆಣಗಾಡುತ್ತಿದ್ದಾರೆ, ಮುಖವಾಡಗಳು, ಕೈಗವಸುಗಳು ಮತ್ತು ಸ್ಯಾನಿಟೈಸರ್ಗಳ ಪ್ರಸ್ತುತತೆ ಎಲ್ಲಿದೆ? ಕೇಂದ್ರ ಸರ್ಕಾರ ವಿನ್ಯಾಸಗೊಳಿಸಿದ ಆರೋಗ್ಯ ಮುನ್ನೆಚ್ಚರಿಕೆಗಳು ಕ್ರೂರ ತಮಾಷೆಯಾಗಿ ಕಂಡುಬರುತ್ತವೆ. ಕೇಂದ್ರ ಸರ್ಕಾರವು ಈ ದೇಶದ ಕಾರ್ಮಿಕರನ್ನು ಮತ್ತೊಮ್ಮೆ ನಿರ್ಲಕ್ಷಿಸಿದೆ. ಯಾವುದೇ ಬಿಡುವು, ಭರವಸೆ ಅಥವಾ ಸಮಾಧಾನವಿಲ್ಲ. ನಾವು ಮಾಧ್ಯಮಗಳಲ್ಲಿ ತೋರಿಸುವ ಕಾರ್ಮಿಕರನ್ನು ಶೋಚನೀಯ ಜನಸಾಮಾನ್ಯರಂತೆ, ರೈಲ್ವೆ ನಿಲ್ದಾಣದಲ್ಲಿ ಮಲಗುವುದನ್ನು, ರಸ್ತೆಗಳಲ್ಲಿ ಬರಿಗಾಲಿನಲ್ಲಿ ನಡೆಯುವುದನ್ನು ನೋಡುತ್ತೇವೆ. ಈ ಆಯ್ದ ಪ್ರಾತಿನಿಧ್ಯವು ಅವರ ಘನತೆಯನ್ನು ಕಸಿದುಕೊಳ್ಳುತ್ತದೆ ಮತ್ತು ಈ ಪರಿಸ್ಥಿತಿಯನ್ನು ಸೃಷ್ಟಿಸಿದ ವ್ಯವಸ್ಥಿತ ಸಮಸ್ಯೆಗಳತ್ತ ಕೈತೋರಿಸಲು ವಿಫಲಗೊಳ್ಳುತ್ತದೆ.



*'ಬೆವರು'ವಿನ ಈ ಸಂಚಿಕೆ ಬೆಂಗಳೂರಿನಲ್ಲಿನ ಕೋವಿಡ್ 19 ಲಾಕ್ಡೌನ್ ಅವಧಿಯಲ್ಲಿ ವಲಸೆ ಕಾರ್ಮಿಕರ ಅನುಭವಗಳಿಗೆ ಒಳನೋಟವನ್ನು ನೀಡುತ್ತದೆ. ಓದಿರಿ ಇತ್ತೀಚಿನ ಮಾನವ ಇತಿಹಾಸದಲ್ಲೆ ಅತ್ಯಂತ ಭಯಾನಕ ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆಯ ವಾರದಲ್ಲಿ ವಿಶ್ವದಾದ್ಯಂತ ಶತಕೋಟಿ ಜನರು ಹೇಗೆ ಅನಿರ್ದಿಷ್ಟ ಸಂಪರ್ಕ, ಹಸಿವು ಮತ್ತು ಕೈಗೆಟುಕದ ಆರೋಗ್ಯ ರಕ್ಷಣೆಯ ತೊಂದರೆಗಳನ್ನು ಎದುರಿಸುತ್ತಿದ್ದಾರೆ ಎಂಬುದರ ಬಗ್ಗೆ ಬರಹಗಳಿವೆ. ಈ ಕಷ್ಟಕರ ಸಮಯಗಳನ್ನು ಎದುರಿಸುತ್ತಿರುವ ಕಾರ್ಮಿಕರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳು ಮಾತ್ರವಲ್ಲದೆ, ಮನಸ್ಥಿತಿ, ಆಸೆಗಳು, ಭಯಗಳು ಮತ್ತು ಹತಾಶ ಭಾವನೆಯ ವಿರುದ್ಧದ ಹೋರಾಟವನ್ನು ಸಹ ಈ ಸಂಚಿಕೆಯಲ್ಲಿ ನಿಮ್ಮ ಮುಂದೆ ತರಲು ನಾವು ಪ್ರಯತ್ನಿಸಿದ್ದೇವೆ. ತಾತ್ಕಲಿಕವಾದ ಪರಿಹಾರ ನೀಡಿ ನಾವು ಕೈ ತೊಳೆದುಕೊಳ್ಳಲು ಸಾಧ್ಯವಿಲ್ಲ. ಈ ಸಂಚಿಕೆಯು ನಮ್ಮ ಓದುಗರಲ್ಲಿ ನಮ್ಮ ಈ ಜಗತ್ತನ್ನು ಸ್ಥಿತಿಬದ್ಧವಾಗಿಡುವ ಕಾರ್ಮಿಕರ ಮೇಲೆ ಲಾಕ್ಡೌನಿಂದಾಗುವ ಪ್ರಭಾವಗಳತ್ತ ಗಮನ ಹರಿಸಲು ಉತ್ತೇಜಿಸುವುದು ಎಂದು ಭಾವಿಸುತ್ತೇವೆ.*

# ನಾನು ಮೆಟ್ರೋವನ್ನು ಕಟ್ಟಿದೆ

ನಾನು ಈ ನಗರಕ್ಕೆ 2010ರಲ್ಲಿ ಬಂದೆ. ನಾನು ಎಂ ಜಿ ರೋಡ್, ಮಜೆಸ್ಟಿಕ್, ಮೈಸೂರು ರಸ್ತೆ, ಆರ್ ಆರ್ ನಗರದಲ್ಲಿ ವಾಸಮಾಡಿದ್ದು, ಈಗ ಬನ್ನೇರುಘಟ್ಟದಲ್ಲಿ ವಾಸಿಸುತ್ತಿದ್ದೇನೆ. ಬೆಂಗಳೂರಿನ ಇಡೀ ಮೆಟ್ರೋವನ್ನು ನಾನೇ ಕಟ್ಟಿದಂತೆ ಅನಿಸುತ್ತದೆ. ಒಳಗೇನಾಗುತ್ತದೆ ಎಂದು ನನಗೆ ಗೊತ್ತಿದೆ. ನಾವು ಹೊರಟು ಹೋದರೆ, ಇದನ್ನು ಯಾರು ಮುಗಿಸುತ್ತಾರೆ. ನಾವೆಲ್ಲರೂ ಒಟ್ಟಿಗೆ ಈ ನಗರವನ್ನು ಬಿಟ್ಟೆವೆಂದೂ, ಮತ್ತೆಂದೂ ಈ ನಗರಕ್ಕೆ ಬರುವುದಿಲ್ಲವೆಂಬ ಕನಸನ್ನು ಕಂಡೆ. ಆಗ ನಗರದ ಜನ ತಮ್ಮ ಕೆಲಸಗಳನ್ನು ಬಿಟ್ಟು ಮೆಟ್ರೋ ಕಟ್ಟಲು ಶುರುಮಾಡುತ್ತಾರೆ. ನಾವು ಶುರುಮಾಡಿದ ಕಾರ್ಯವನ್ನು ಅವರು ಪೂರೈಸಬೇಕಾಗಿದೆ, ಏಕೆಂದರೆ ಸಾರಿಗೆಯ ಎಲ್ಲಾ ವ್ಯವಸ್ಥೆಗಳು ಕುಸಿದಿವೆ. ನಾವೆಲ್ಲರೂ ಈ ವೀಡಿಯೋಗಳನ್ನು ವಾಟ್ಸಾಪ್‌ನಲ್ಲಿ ನೋಡಿ ಜೋರಾಗಿ ನಗುತ್ತಿರುವ ನೆನಪಿದೆ.

ನಾನು ನನ್ನ ಅರ್ಧ ಜೀವನವನ್ನು ನಗರಗಳಲ್ಲಿ ಕಳೆದಿದ್ದೇನೆ. ಮನೆಯಿಂದ ಓಡಿಹೋದೆ, ನನ್ನ ತಂದೆಯೊಬ್ಬ ಅಸಭ್ಯ ಮನುಷ್ಯನಾಗಿದ್ದ, ನಾನು ಯಾರ ಮಾತನ್ನು ಕೇಳುತ್ತಿರಲಿಲ್ಲ. ಅಂದಿನಿಂದ ನಾನು ಹಿಂದಿರುಗಿಲ್ಲ. ಜೀವನದ ಪಾಠವನ್ನು ರಸ್ತೆಯ ಮೇಲೆ ಕಲಿತೆ. ನಾನು ನನ್ನ ಕೆಲಸವನ್ನು ಪ್ರೀತಿಸುತ್ತೇನೆ, ನನ್ನಷ್ಟು ಚೆನ್ನಾಗಿ ಬೆಸುಗೆ ಹಾಕಲು ಯಾರಿಂದಲೂ ಸಾಧ್ಯವಿಲ್ಲ. ತೊಂದರೆಯೇನೆಂದರೆ ಹೆಚ್ಚಿನ ಜನರು ನನ್ನನ್ನು ಹುಡುಕಲು ಸಾಧ್ಯವಿಲ್ಲ. ನಾನು ಅನೇಕ ಮಹಾನಗರಗಳ ಮೆಟ್ರೋಗಳನ್ನು ನಿರ್ಮಿಸಿದ್ದೇನೆ - ಹೈದರಾಬಾದ್, ಬೆಂಗಳೂರು, ದೆಹಲಿ - ಈ ಎಲ್ಲ ನಗರಗಳ ಅನುಭವ ನನಗಿದೆ. ನನ್ನ ಸುತ್ತಮುತ್ತಲೂ ಎಲ್ಲರೂ ಮನೆಗೆ ಹೋಗಬೇಕೆಂದು ಹಾತೊರೆಯುತ್ತಿದ್ದಾರೆ, ಕೆಲವರು ಭಯಭೀತರಾಗಿದ್ದಾರೆ, ಕೆಲವರು ಕೆಲಸ ಮಾಡದೆ ಬೇಜಾರಾಗಿದ್ದಾರೆ. ಎಲ್ಲರೂ ಹೇಳುವುದು ಇದೇ - ನಾನು ಮನೆಗೆ ಹೋಗಬೇಕು, ರೈಲುಗಳು ಯಾವಾಗ ಶುರುವಾಗುತ್ತವೆ? 15 ವರ್ಷಗಳ ನಂತರ, ನನ್ನ ಮನೆಯ ಬಗ್ಗೆ ಕನಸು ಕಂಡೆ. ಮೀನಾ ಬಜಾರ್, ದಿನದಲ್ಲಿ 4-5 ಬಾರಿ ಸ್ನಾನ ಮಾಡುತ್ತಿದ್ದ ಕೊಳ, ದರ್ಗಾ, ತಾಜಾ ಲಿಟ್ಟಿ ಚೋಕಾದ ಪರಿಮಳ ಮತ್ತು ರೆಹಾನಾ ಬಗ್ಗೆ ಕನಸು ಕಂಡೆ.

6 ತಿಂಗಳ ಹಿಂದೆ ನಾನು ಬೆಂಗಳೂರಿಗೆ ಬಂದೆ. ಇಲ್ಲಿನ ಹವಾಮಾನವನ್ನು ಇಷ್ಟಪಡುತ್ತೇನೆ. ಸಹಿಸಿಕೊಳ್ಳಬಹುದಾದರೂ, ಕೆಲವೊಮ್ಮೆ ನಮ್ಮನ್ನು ಸೋಮಾರಿಯನ್ನಾಗಿ ಮಾಡುತ್ತದೆ. ನೇರಳೆ ರೇಖೆಯನ್ನು ನಿರ್ಮಿಸುವಾಗ ನಾನು ಬಂದಿದ್ದೆ. ಬೈಯಪ್ಪನಹಳ್ಳಿ ನಿಲ್ದಾಣವು ಬಹುತೇಕ ಪೂರ್ಣಗೊಂಡಿದ್ದು, ನನ್ನನ್ನು ಬೈಯಪ್ಪನಹಳ್ಳಿ ನಿಲ್ದಾಣದ ಬಳಿಯ ಓವರ್ ಬ್ರಿಡ್ಜ್ ನಿರ್ಮಿಸಲು ನಿಯೋಜಿಸಿದರು. ನೀವು ಆ ಸೇತುವೆಯನ್ನು ನೋಡಿದ್ದೀರಾ? ನೋಡಲು ಗಟ್ಟಿಮುಟ್ಟಾಗಿ, ಭವ್ಯವಾಗಿ ಕಾಣುತ್ತದೆ. ನನಗೆ ಅದರ ಬಗ್ಗೆ ತುಂಬಾ ಹೆಮ್ಮೆ. ಆದರೆ ನನ್ನ ಗುತ್ತಿಗೆದಾರ ನನಗೆ 6 ತಿಂಗಳ ಕಾಲ ಹಣ ಪಾವತಿಸಲಿಲ್ಲ. ನನಗೆ ಏನನ್ನೂ ಮನೆಗೆ ಕಳುಹಿಸಲು ಸಾಧ್ಯವಾಗಲಿಲ್ಲ. ನಾನು ಯಾಕೆ ಮನೆಗೆ ಹಣ ಕಳುಹಿಸಲಿಲ್ಲ ಎಂದು ತಿಳಿಯಲು ನನ್ನ ತಾಯಿ ಪ್ರತಿದಿನ ನನಗೆ ಫೋನ್ ಮಾಡುತ್ತಿದ್ದರು.

ನನಗೆ ನಾಚಿಕೆಯಾಯಿತು. ಮದ್ಯಪಾನ ಮಾತ್ರ ನನ್ನನ್ನು ರಕ್ಷಿಸಿತು. ನನಗೆ ಅಳಲು ಸಹಾಯ ಮಾಡಿತು. ಕೆಲಸ ಮಾಡಲು, ಮರುದಿನ ಎಚ್ಚರಗೊಳ್ಳಲು ನನಗೆ ಸಹಾಯ ಮಾಡಿತು. ಒಂದು ರಾತ್ರಿ, ನಾನು ನಿರ್ಮಾಣ ಸ್ಥಳದಿಂದ ದೂರ ಹೋಗಲು ಪ್ರಾರಂಭಿಸಿದೆ. ನನಗೆ ಕೋಪ ಬಂದಿತ್ತು. ಹುಚ್ಚುಹಿಡಿದಂತಾಗಿತ್ತು. ಸಂಜೆ ಸುಮಾರು 4 ಗಂಟೆ. ರಸ್ತೆಯಲ್ಲಿ ಎಳೆನೀರು ಮಾರಾಟಗಾರನೊಬ್ಬನನ್ನು ಪಕ್ಕಕ್ಕೆ ತಳ್ಳಿ, ಅವನ ಚೂರಿಯನ್ನು ತೆಗೆದುಕೊಂಡು ಮುಂದೆ ಸಾಗಿದೆ. ನಾನು ಹಿಂದೆಂದೂ ನೋಡಿರದ ಬಾಗಿಲನ್ನು ತಟ್ಟಿದೆ. ಅವನು ಬಾಗಿಲು ತೆರೆದನು, ನಾನು ಅವನ ಕತ್ತು ಕತ್ತರಿಸಿದೆ. ಅದು ನನ್ನ ಗುತ್ತಿಗೆದಾರ. ಬೆವರುತ್ತಾ ಎಚ್ಚರವಾದೆ. ನಾನು ಮರುದಿನವೇ ನಗರವನ್ನು ತೊರೆದು ಮತ್ತೆಂದಿಗೂ ಇಲ್ಲಿಗೆ ಹಿಂದಿರುಗುವುದಿಲ್ಲ ಎಂದು ಶಪಥ ಮಾಡಿದೆ.

ನಾನೊಬ್ಬ ಕ್ರೇನ್ ಆಪರೇಟರ್. 2009ನಲ್ಲಿ ಮೆಟ್ರೋ ನಿರ್ಮಾಣ ಶುರುವಾದಾಗಿನಿಂದ ಬೆಂಗಳೂರಿನಲ್ಲಿರುವ ಏಕೈಕ ಕೆಲಸಗಾರ ನಾನಾಗಿರಬೇಕು. ನಾನು ಈಗ ಕನ್ನಡವನ್ನು ಸಹ ಮಾತನಾಡುತ್ತೇನೆ. ನಾನಿಲ್ಲದೆ ಮೆಟ್ರೋವನ್ನು ನಿರ್ಮಿಸಲು ಸಾಧ್ಯವಾಗುತ್ತಿರಲಿಲ್ಲ, ಈ ನಗರವು ನನಗಿಂತ ಉತ್ತಮ ಕ್ರೇನ್ ಆಪರೇಟರ್ ಅನ್ನು ಹುಡುಕಲು ಸಾಧ್ಯವಿಲ್ಲ. ನಾನು ಕ್ರೇನ್ ಆಪರೇಟ್ ಮಾಡುವಾಗ, ಮೇಲಿಂದ ನೋಡುವಾಗ ದೃಷ್ಟಿಕೋನ ಬದಲಾಗುತ್ತದೆ. ನನಗೆ ಕಾರ್ಮಿಕ ಕಾಲೊನಿಯಲ್ಲಿ ವಾಸಿಸಲು ಇಷ್ಟವಿಲ್ಲ. ನನ್ನ ವಯಸ್ಸಿನಿಂದಾಗಿ ಇಷ್ಟೊಂದು ಜನರೊಂದಿಗೆ ಕೋಣೆ ಹಂಚಿಕೊಳ್ಳಲು ನಾಚಿಕೆ ಎನಿಸಿತು. ಒಂಟಿಯಾಗಿರಲು ನಾನು ಇಷ್ಟಪಡುತ್ತೇನೆ. ನನ್ನ ಫುಲ್ಕಾ ಸಬ್ಜಿಯನ್ನು ನಾನೇ ತಯಾರಿಸಲು ಇಷ್ಟಪಡುತ್ತೇನೆ. ಹಾಗಾಗಿ ನಾನು ಒಂದು ಕೋಣೆಯನ್ನು ತೆಗೆದುಕೊಂಡು ನನ್ನ ಸಂಬಳದಿಂದ ಬಾಡಿಗೆ ಕಟ್ಟಿದೆ. ಎರಡು ಹೊತ್ತಿನ ಊಟ ಪಡೆಯಲು ಹೆಣಗಾಡಿದೆ. ನಾನು ಉಳಿದವರಿಗಿಂತ ನುರಿತವನಾಗಿದ್ದರೂ, ಇತರ ಕಾರ್ಮಿಕರಷ್ಟೇ ಸಂಬಳ ಸಿಗುತ್ತಿತ್ತು, ಹೀಗಾಗಿ ನನಗೆ ಯಾವುದೇ ಹಣವನ್ನು ಉಳಿಸಲು ಸಾಧ್ಯವಾಗಲಿಲ್ಲ. ನಾನು ವರ್ಷಕ್ಕೊಮ್ಮೆ ಮನೆಗೆ ಹೋಗುತ್ತಿದ್ದೆ. ವರ್ಷಗಳಲ್ಲಿ, ನನ್ನ ಹೆಂಡತಿಗೆ ನನ್ನ ಮೇಲೆ ಅನುಮಾನ ಶುರುವಾಯಿತು. ನಾನು ಇನ್ನೊಬ್ಬ ಹೆಂಗಸಿನೊಂದಿಗೆ ಇದ್ದೇನೆ ಎಂದು ಅವಳು ಭಾವಿಸಿದಳು, ಏಕೆಂದರೆ ಕೆಲವು ತಿಂಗಳುಗಳ ಕಾಲ ನನಗೆ ಯಾವುದೇ ಹಣವನ್ನು ಮನೆಗೆ ಕಳುಹಿಸಲಾಗಲಿಲ್ಲ. ಒಂದು ದಿನ ಅವಳು ಕರೆ ಮಾಡಿ ಮತ್ತೆ ಮನೆಗೆ ಬರಬೇಡ ಎಂದು ಹೇಳಿದಳು. ನನ್ನ ಮಗಳು ಅಥವಾ ಮಗನನ್ನು ಇನ್ನು ಮುಂದೆ ಭೇಟಿಯಾಗಲು ಸಾಧ್ಯವಿಲ್ಲ ಎಂದು ಅವಳು ಹೇಳಿದಳು. ಇದು ಒಂದು ಕನಸೆಂದು ನಾನು ಭಾವಿಸಿದೆ. ನಾನು ಎರಡು ವರ್ಷಗಳ ಹಿಂದೆ ಮನೆಗೆ ಹಿಂತಿರುಗಲು ಪ್ರಯತ್ನಿಸಿದಾಗ, ನನ್ನ ಹಳ್ಳಿಯ ಜನರು ನನ್ನನ್ನು ಥಳಿಸಿ ಹೊರಗಟ್ಟಿದರು. ನಾನು ಬೆಂಗಳೂರಿಗೆ ಮರಳಿದೆ. ನಾನು ಇನ್ನೂ ಕ್ರೇನ್ ಆಪರೇಟರ್ ಆಗಿ ಇಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಒಬ್ಬಂಟಿಯಾಗಿ ಜೀವಿಸುತ್ತಿದ್ದೇನೆ. ಇತ್ತೀಚಿಗೆ ನಾನು ಬೆಂಗಳೂರಿನಲ್ಲಿದ್ದೇನೆ, ಮನೆಗೆ ಬನ್ನಿ, ನನ್ನನ್ನು ಭೇಟಿ ಮಾಡಿ.

ಕಳೆದ ದಶಕದಿಂದ ಮೆಟ್ರೋ ಕಟ್ಟುತ್ತಿರುವ ನಾಲ್ಕು ಕೆಲಸಗಾರರೊಂದಿಗಿನ ಸಂಭಾಷಣೆಯ ಮೇಲೆ ಆಧಾರಿತವಾದ ಲೇಖನವಿದು.



*ಲಾಕ್‌ಡೌನಿನ ಸಮಯದಲ್ಲಿ ಮೆಟ್ರೋ ಕೆಲಸಗಾರರ ಬದುಕು ಮತ್ತು ಕೆಲಸದ ಸ್ಥಿತಿಗತಿಗಳ ಬಗೆಗಿನ ಮರಾದ ವರದಿಯನ್ನು ಕಾರ್ಮಿಕ ಇಲಾಖೆಗೆ ಏಪ್ರಿಲ್ 6ರಂದು ಸಲ್ಲಿಸಲಾಗಿದ್ದು, ತರುವಾಯ ಏಪ್ರಿಲ್ 11ರಂದು ಬಹಿರಂಗಪಡಿಸಿ, ಸರ್ಕಾರವನ್ನು ಕ್ರಮ ಕೈಗೊಳ್ಳಲು ಉತ್ತೇಜಿಸಿತು. ಓದಿರಿ*

# ನಾವು ಓಳಗೆ ಹೇಗಿರಲಾಗುತ್ತದೆ?

## ರಸ್ತೆಯೇ ನಮ್ಮ ಕೆಲಸದ ಸ್ಥಳ

ಕೈಗವಸು, ಸಾನಿಟೈಜರ್, ಮುಖವಾಡ, ಸಾಮಾಜಿಕ ದೂರವಿರುವಿಕೆ, ಮಾಲಿನ್ಯ - ಈ ಮುನ್ನೆಚರಿಕೆಗಳು, ನಿಬಂಧನೆಗಳು ಸ್ಪರ್ಶ, ಸಾಮೀಪ್ಯ ಮತ್ತು ಅನ್ಯೋನ್ಯತೆಯ ಅವಶ್ಯಕತೆಯಿರುವ ಕಾರ್ಯಗಳ ಮೇಲೆ ಹೇಗೆ ಪರಿಣಾಮ ಬೀರುತ್ತವೆ?

"ನಾವು ಸುದ್ದಿ ನೋಡಿದಾಗ ಭಯವಾಗುತ್ತದೆ. ಎಲ್ಲಾ ಆರೋಗ್ಯದ ಮುನ್ನೆಚ್ಚರಿಕೆಗಳು ಸಾಮಾಜಿಕ ದೂರವಿಡುವಿಕೆಯನ್ನು ಪಾಲಿಸುವಂತೆ, ದೈಹಿಕ ಸಂಪರ್ಕ ಮಾಡದಂತೆ ಎಚ್ಚರಿಸುತ್ತವೆ. ಹೀಗಾದರೆ ನಾವು ಹೇಗೆ ಕೆಲಸಮಾಡುವುದು?"

ರಸ್ತೆ ಆಧಾರಿತ ಲೈಂಗಿಕ ಕಾರ್ಯಕರ್ತೆಯರ ಸಮೂಹವಾದ ಸಾಧನ ಮಹಿಳಾ ಸಂಘದವರು ಹೆಚ್ಚಾಗಿ ಚಿಂತಿತರಾಗಿರುವುದು ಲಾಕ್ ಡೌನ್ ಮುಗಿದ ನಂತರ ಏನಾಗುತ್ತದೆ ಎಂಬುದರ ಬಗ್ಗೆ. 80ರ ದಶಕದಲ್ಲಿ ಹೆಚ್ ಐ ವಿ ಏಕಾಏಕಿಯ ಸಮಯದಲ್ಲಿ ಅವರು ಏನನ್ನು ಅನುಭವಿಸಿದರು ಎಂದು ಇದುವರೆಗೂ ನೆನೆಪಿದೆ. ಅನಾರೋಗ್ಯಕ್ಕಿಂತ, ಅನಾರೋಗ್ಯದಿಂದ ಉಂಟಾದ ಕಳಂಕದ ಸೋಂಕು ಅವರನ್ನು ಬೆನ್ನಟ್ಟಿತು. ಹೆಚ್ ಐ ವಿಯ ಸಮಯದಲ್ಲಿ ಲೈಂಗಿಕ ಕೆಲಸಗಾರರ ರೂಪವೇ ಮಲಿನವಾದಂತೆ ಪರಿಗಣಿಸಲಾಗಿತ್ತು. ಆ ಕಳಂಕದಿಂದ ಗುಣಮುಖರಾಗಲು ಹಲವಾರು ವರ್ಷಗಳೇ ಬೇಕಾದವು, ಈಗ ಮತ್ತೆ ಕೋವಿಡ್ 19 ನಿಂದ ಅದೇ ತರಹದ ಸನ್ನಿವೇಶ ಉಂಟಾಗುವುದು ಎಂದು ಲೈಂಗಿಕ ಕೆಲಸಗಾರರು ಚಿಂತಾಕ್ರಾಂತರಾಗಿದ್ದಾರೆ.

ಲೈಂಗಿಕ ಕಾರ್ಯಕರ್ತರಿಗೆ ಈ ಲಾಕ್ ಡೌನ್ ಕ್ರೂರವಾಗಿದ್ದು, ಅವರು ರಸ್ತೆಗೆ ಮತ್ತು ಸಾರ್ವಜನಿಕ ಸ್ಥಳಗಳಿಗೆ ಹೋಗಲಾರದೆ, ದುಡಿಯಲಾಗದೆ, ಮನೆಯಲ್ಲಿರುವಂತೆ ಆಗಿದೆ. ಅಲ್ಲದೆ ಅವರ ಸಂಗಾತಿಗಳು ದಯಾಹೀನರಾಗಿ ಅವರಿಗೆ ಸಹಾಯ ಮಾಡಲು ಒಪ್ಪುತ್ತಿಲ್ಲ. "ನಾನು ನನ್ನ ಸಂಗಾತಿಗೆ ಕರೆ ಮಾಡಿ ಸಹಾಯ ಕೇಳಿದರೆ, ಹಣವನ್ನು ಆನ್ಲೈನ್ ಕಳುಹಿಸುವುದು ಗೊತ್ತಿಲ್ಲವೆಂದು ನೆಪ ಹೇಳುತ್ತಾನೆ. ಇದರಿಂದ ತುಂಬಾ ನೋವಾಗುತ್ತದೆ. ಮುಂಚೆ, ನನ್ನ ಬಿಡುವಿನ ದಿನವಾದರೂ ಆತ ಕರೆದ ಎಂದ ಕಾರಣಕ್ಕಾಗಿ ಹೋಗುತ್ತಿದ್ದೆ. ನಾನು ಅವನ ಹೆಂಡತಿಯ ಹಾಗೆ ಎಂದು ಹೇಳುತ್ತಿದ್ದ. ಅವನಿಗೆ ಜ್ವರವಿದ್ದರೂ ಅವನೊಂದಿಗೆ ಮಲಗುತ್ತಿದ್ದೆ. ಆದರೆ ಈಗ, ಈ ವೈರಸ್ ಭಯಾನಕವಾಗಿದೆ, ನಿನ್ನಿಂದ ನಾನು ಸೋಂಕಿತನಾಗ ಬಹುದು ಎಂದು ಹೇಳುತ್ತಾನೆ. ನನ್ನನ್ನು ಈಗ ನೋಡಲೂ ಇಷ್ಟಪಡುವುದಿಲ್ಲ, ನಾನೀಗ ಆತನ ಹೆಂಡತಿಯೂ ಅಲ್ಲ. ಬಹಳ ಸುಲಭವಾಗಿ ಬಿಟ್ಟುಬಿಟ್ಟರಲ್ಲವೇ?" ಎಂದು ಸಮೂಹದ ಒಬ್ಬ ಸದಸ್ಯರು ಹಂಚಿಕೊಂಡರು.

ಆಸ್ಪತ್ರೆಗಳೆಲ್ಲ ಕೋವಿಡ್ 19ರ ಹೊರೆ ಹೊತ್ತಿದ್ದು, ಬೇರೆ ರೀತಿಯ ಚಿಕಿತ್ಸೆ ಬೇಕಾದ ಜನರಿಗೆ ಆರೋಗ್ಯ ಮತ್ತು ಔಷಧಿಗಳು ಸಿಗುವುದು ಕಷ್ಟವಾಗಿದೆ. ಇದರಲ್ಲಿ ಹಲವಾರು ಲೈಂಗಿಕ ಕಾರ್ಯಕರ್ತರು ART ಚಿಕಿತ್ಸೆ ಪಡೆಯುವವರಾಗಿದ್ದಾರೆ. ಹಠಾತ್ ಲಾಕ್‌ಡೌನಿಂದ ಅವರು ತಮ್ಮ ವಾರದ ತಪಾಸಣೆ ಮತ್ತು ಚಿಕಿತ್ಸೆಗೆಂದು ಆಸ್ಪತ್ರೆಗೆ ಹೋಗಲಾಗುತ್ತಿಲ್ಲ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲೆ ಮೂರು ವಾರಗಳ ಕಾಲ ಒತ್ತಡ ಹೇರಿದ ನಂತರವೇ ಅವರು ಹೆಂಗಸರಿಗೆ ಔಷಧಿ ಪಡೆಯಲು ಅನುಮತಿ ಮತ್ತು ಪಾಸ್‌ಗಳನ್ನು ನೀಡಿದರು.

ಎಲ್ಲಾ ಕಾರ್ಮಿಕರಂತೆ ಲೈಂಗಿಕ ಕಾರ್ಯಕರ್ತರೂ ಎರಡು ಹೊತ್ತಿನ ಊಟಕ್ಕಾಗಿ ಒದ್ದಾಡುತ್ತಿದ್ದಾರೆ. ಆದಾಯದ ಯಾವುದೇ ಮೂಲವಿಲ್ಲ, ರೇಷನ್ ಬೆಲೆ ದ್ವಿಗುಣಗೊಂಡಿದೆ. ರೇಷನ್ ಕೊಳ್ಳಲು ಹೊರಗೆ ಕಾಲಿಟ್ಟರೆ ಪೊಲೀಸ್ ಕಿರುಕುಳ ನೀಡಿ ಒಳಗಟ್ಟುತ್ತಾರೆ."ನನಗೆ ಅತ್ಯಂತ ಖುಷಿಯಾಗುವುದು ನಾನು ಹೊರಗೆ ತಿರುಗಾಡುವಾಗ. ನನ್ನ ಕೆಲಸವಿರುವುದು ಬೀದಿಯಲ್ಲಿ. ನಾನು ಗಳಿಸಿದ ಹಣದಲ್ಲಿ ಮನೆ ನಡೆಸುತ್ತೇನೆ. ನನ್ನ ಮಕ್ಕಳ ಓದಿಗಾಗಿ ಹಣ ಕಟ್ಟಬಹುದು."

"ವೈರಸ್ ಸಿಡಿದಾಗಿನಿಂದ ನಾನು ಮನೆಯೊಳಗೆ ಕೂತಿದ್ದೇನೆ. ನನಗೆ ದುಡಿಯುವ ಯಾವುದೇ ಮಾರ್ಗವಿಲ್ಲ, ನಾನು ಬೇರೆಯವರ ಮೇಲೆ ಅವಲಂಬಿತಳಾಗಿದ್ದೇನೆ. ನನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದೇನೆ."

ಸಾಧನ ಮಹಿಳಾ ಸಂಘದ ಸದಸ್ಯರು ಮುಂಬರುವ ಸನ್ನಿವೇಶಗಳಿಗೆ ಮಾನಸಿಕವಾಗಿ ತಯಾರಾಗುತ್ತಿದ್ದಾರೆ. ಕೆಲವರು ಆದಾಯದ ಕೊರತೆಯನ್ನು ನೀಗಿಸಲು ಮನೆಯಲ್ಲಿ ಉಪ್ಪಿನಕಾಯಿ ಮತ್ತು ಪಾಪಡ್ ಅನ್ನು ತಯಾರಿಸಿ ತಮ್ಮ ನೆರೆಹೊರೆಯಲ್ಲಿ ಮಾರುತ್ತಿದ್ದಾರೆ. ಮೊದಲಿನ ಹಾಗೆ ನಗರದ ಸಾರ್ವಜನಿಕ ಸ್ಥಳಗಳಲ್ಲಿ ಅವರು ಇರಲಾಗುವುದೇ ಎಂದು ಅವರಿಗೆ ತಿಳಿದಿಲ್ಲ. ಈ ಅನಿಶ್ಚಿತತೆಯು ತಮ್ಮ ಕುಟುಂಬದ ದುಡಿಯುವ ಕೈಗಳಾದ ಹಲವಾರು ಲೈಂಗಿಕ ಕಾರ್ಯಕರ್ತರ ಮೇಲೆ ಮಾನಸಿಕವಾಗಿ ಒತ್ತಡ ಹೇರುತ್ತಿದೆ.

"ನಾನು ನನ್ನ ಕಷ್ಟವನ್ನು ಯಾರೊಂದಿಗೆ ಹಂಚಿಕೊಳ್ಳಲಿ? ನನ್ನ ಸೊಸೆಗೆ ನನ್ನ ತೊಂದರೆಗಳು ಅರ್ಥವಾಗುವುದಿಲ್ಲ. ನನ್ನ ಮಕ್ಕಳಿಗೆ ನನ್ನ ಕೆಲಸದ ಬಗ್ಗೆ ಹೇಳಲಾಗುವುದಿಲ್ಲ. ಸುದ್ದಿವಾಹಿನಿಗಳು ತಪ್ಪೆನ್ನುವ ದೈಹಿಕ ಸಂಪರ್ಕ ನನಗೆ ಬೇಕೆಂದು ಅವರಿಗೆ ಹೇಗೆ ಹೇಳಲಿ?"

ಅನ್ಯೋನ್ಯತೆ ಮತ್ತು ಬಯಕೆಯೊಂದಿಗಿನ ನಮ್ಮ ಸಂಬಂಧ ಹೇಗೆ ಬದಲಾಗುತ್ತದೆ? ದೈಹಿಕ ಸಾಮಿಪ್ಯ ಬೇಕಾಗುವಂತಹ ಕೆಲಸದ ವಿರುದ್ಧ ಹೊಸ ರೀತಿಯ ಕಳಂಕ ಮತ್ತು ತಾರತಮ್ಯಗಳು ಹುಟ್ಟಿಕೊಳ್ಳುವುದೇ? ಲೈಂಗಿಕ ಕಾರ್ಯಕರ್ತರ ಆರ್ಥಿಕ, ಮಾನಸಿಕ ಮತ್ತು ಭಾವನಾತ್ಮಕ ಹಾನಿಗಳಿಗೆ ಯಾರು ಹೊಣೆ ಹೊರುತ್ತಾರೆ? ಕೋವಿಡ್ 19 ನಂತರದ ಭವಿಷ್ಯದ ನಿರ್ಮಾಣಕ್ಕಾಗಿ ಪರಿಗಣಿಸಬೇಕಾದ ಹಲವಾರು ಪ್ರಶ್ನೆಗಳನ್ನು ಲೈಂಗಿಕ ಕಾರ್ಯಕರ್ತರು ಕೇಳುತ್ತಾರೆ.

**ಈ ಲೇಖನವನ್ನು ಬೆಂಗಳೂರಿನ ರಸ್ತೆ ಆಧಾರಿತ ಲೈಂಗಿಕ ಕಾರ್ಯಕರ್ತರ ಹಕ್ಕುಗಳ ಕಾಪಾಡುವ ಸಾಧನ ಮಹಿಳಾ ಸಂಘದ ಸದಸ್ಯರ ಅನುಭವದ ಮೇಲೆ ಆಧಾರಿತವಾಗಿದೆ.*

# ಹಸಿವಿಗಿಂತ ಮಾರಕ ಯಾವುದು?

ನಗರವು ಲಾಕ್ಡೌನ್ ಆದ ದಿನದಿಂದ, ಇವರಿಗೆ ಕೆಲಸಕ್ಕೆ ಬರಬೇಡ ಎಂದು ಹೇಳಲಾಗುತ್ತದೆ. ಹಠಾತ್ ನಿರ್ಜನವಾದ ಬೀದಿಗಳಲ್ಲಿ ಪಕ್ಷಿಗಳ ವಟಗುಟ್ಟುವಿಕೆ ಮತ್ತು ನಾಯಿಗಳ ಬೊಗಳುವಿಕೆಯನ್ನು ಹೊರತುಪಡಿಸಿ, ಯಾವುದೇ ಶಬ್ದವಿಲ್ಲ. ಅವನ ಮತ್ತು ಅವನ ಸ್ನೇಹಿತರ ದೈನಂದಿನ ದಿನಚರಿಯ ಮೇಲೆ ಪರಿಣಾಮ ಬೀರುತ್ತದೆ. ಪ್ಲಾಸ್ಟಿಕ್, ಲೋಹ ಮತ್ತು ತವರವನ್ನು ಎಚ್ಚರಿಕೆಯಿಂದ ಬೇರ್ಪಡಿಸುತ್ತಾ, ಭೋಜ್ಪುರಿ ಹಾಡುಗಳನ್ನು ಕೇಳುತ್ತಾ, ಒಮ್ಮೊಮ್ಮೆ ನಗುತ್ತಾ ಕಳೆಯುತ್ತಿದ್ದ ಸಮಯ ಈಗ ಸ್ತಬ್ಧವಾಗಿದೆ. ಉಸಿರುಗಟ್ಟುವ ಬಿಸಿಲು ಬರುತ್ತದೆ. ವದಂತಿ ಮತ್ತು ಸುದ್ದಿಗಳ ಮಿಶ್ರಣವು ಅವರು ವಾಸಿಸುವ ಗೊಡೌನ್ಗಳಿಗೆ ಒಂದು ವೈರಸ್‌ನ ಬಗ್ಗೆ ಹೇಳುತ್ತವೆ. ಸೋಂಕು ತಪ್ಪಿಸಲು, ಮಾನವ ಬಂಧನದ ಅವಶ್ಯಕತೆಯಿದೆ. ಮುಖವಾಡಗಳು, ಕೈಗವಸುಗಳು, ಸ್ಯಾನಿಟೈಜರ್ಗಳು ಮತ್ತು 'ಸೋಷಿಯಲ್ ಡಿಸ್ಟೆನ್ಸ್'ಕುರಿತು ಚರ್ಚೆ ನಡೆಯುತ್ತಿದೆ. ಲೋಹದ ಸ್ಕ್ರ್ಯಾಪ್ಗಳು, ಪ್ಲಾಸ್ಟಿಕ್, ಅಲ್ಯೂಮಿನಿಯಂ, ಕಾಗದದ ಹಾಳೆಗಳೊಂದಿಗೆ, ಅವನೊಂದಿಗೆ ವಾಸಿಸುತ್ತಿದ್ದ ತನ್ನ ಹಳ್ಳಿಯ ಅರವತ್ತು ಪುರುಷರೊಂದಿಗೆ ಅವನಿಗೆ ಗೊತ್ತಿರುವುದು ಕೇವಲ ಸಾಮೀಪ್ಯ. ಅದೇನೇ ಇದ್ದರೂ, ಅವನು ಮುಖವಾಡವೊಂದನ್ನು ಖರೀದಿಸುತ್ತಾನೆ.

ಐನೂರು ಜನರಿರುವ ಐಟಿಪಿಎಲ್ ಎಂದು ಕರೆಯಲ್ಪಡುವ ನಗರದ ಪ್ರಮುಖ ಐಟಿ ಕಾರಿಡಾರ್ನಲ್ಲಿ ಅವರು ಗೇಟೆಡ್ ಸಂಕೀರ್ಣಗಳು ಮತ್ತು ಗಾಜಿನಿಂದ ಮಾಡಿದ ಕಚೇರಿಗಳ ನಡುವೆ ವಾಸಿಸುತ್ತಿದ್ದಾರೆ. ಅವರು ಕನಿಷ್ಠ ಜಾಗದಲ್ಲಿ ನೆಲೆಸುತ್ತಾರೆ. ಸದ್ದಿಲ್ಲದೆ ಕೆಲಸ ಮಾಡುತ್ತಾರೆ. ದಿನಕ್ಕೆ 12-14 ಗಂಟೆಗಳ ಶಿಫ್ಟ್‌ಗಳಲ್ಲಿ ಕಾಲ ಕಳೆಯುತ್ತಾರೆ. ಸಮಯ ಅವರಿಗೆ ಹಣ. ಲೆಕ್ಕಾಚಾರಗಳು ನಿಖರವಾಗಿರಬೇಕು. ನಗರದ ದೈನಂದಿನ ಜೀವನಕ್ಕೆ ಅವು ನಿರ್ಣಾಯಕವಾಗಿವೆ; ಹಂಚುಗಳು, ಪ್ಲಾಸ್ಟಿಕ್, ಕಸ, ಕಾಂಕ್ರೀಟ್, ಇಟ್ಟಿಗೆಗಳು; ಜರಡಿಹಿಡಿಯುವುದು, ಸ್ವಚ್ಛಗೊಳಿಸುವಿಕೆ, ಅಡುಗೆ, ಕಟ್ಟಡ, ನಿರ್ಮಾಣ. ಅವನ ಗುತ್ತಿಗೆದಾರನು ಅವನಿಗೆ ಎರಡು ತಿಂಗಳ ಸಂಬಳ ನೀಡಬೇಕಿದೆ. ಇದು ಕಾನೂನಿಗೆ ವಿರುದ್ಧವಾಗಿದೆ ಎಂದು ಅವನಿಗೆ ಹೇಳಲಾಗುತ್ತದೆ.

ಅವನನ್ನು ಸುತ್ತುವರೆದಿರುವ ಲೋಹವು ಶಾಖದಿಂದ ಹೊಳೆಯುತ್ತದೆ. ನಿದ್ರೆ, ಕಾರ್ಡ್ ಆಟಗಳು ಮತ್ತು ಹಗಲುಗನಸುಗಳಲ್ಲಿ ಸಮಯ ಹಾದುಹೋಗುತ್ತದೆ. ಅವನ ಹೆಂಡತಿ ಫೋನಿನ ಮೂಲಕ ಆದಷ್ಟು ಬೇಗ ಬೆಳೆ ಕೊಯ್ಲು ಮತ್ತು ಹೊಲಗಳನ್ನು ತೆರವುಗೊಳಿಸಬೇಕೆಂಬ ಸುದ್ದಿ ತಿಳಿಸುತ್ತಾಳೆ. ಆದರೆ ಉತ್ಪನ್ನಗಳೊಂದಿಗೆ ನಗರಕ್ಕೆ ಪ್ರವೇಶಿಸಲು ಟ್ರಕ್ಗಳಿಗೆ ಅವಕಾಶವಿಲ್ಲ. ಸೋಯಾಬೀನ್ ಕೊಳೆಯುತ್ತಿರುವುದನ್ನು ಅವಳು ಹೇಳುತ್ತಾಳೆ. ಅವನ ಸುತ್ತ, ಪುರುಷರು ಹಸಿವಿನಿಂದ ಒದ್ದಾಡುತ್ತಾರೆ. ಕೆಲವು ಜಗಳಗಳು ಭುಗಿಲೇಳುತ್ತವೆ. ಅವನು ಗುತ್ತಿಗೆದಾರನನ್ನು ಕರೆಯಲು ಪ್ರಯತ್ನಿಸುತ್ತಾನೆ. ಅವನಫೋನ್‌ಯಾವಾಗಲೂಸ್ವಿಚ್‌ಆಫ್‌ಆಗಿರುತ್ತದೆ. ಪ್ರತಿ ಊಟದೊಂದಿಗೆ, ಅವನ ಉಳಿತಾಯವು ಖಾಲಿಯಾಗುತ್ತದೆ. ತುರ್ತು ಸಂದರ್ಭಕ್ಕಾಗಿ ಸ್ವಲ್ಪ ಹಣವನ್ನು ಮೀಸಲಿಡಬೇಕಾಗುತ್ತದೆ. ಗೋಧಿಯ ಬೆಲೆ ದ್ವಿಗುಣಗೊಂಡಿದೆ. ಅವರು ಸುದ್ದಿ ಓದುತ್ತಾರೆ. ಸಾವಿನ ಸಂಖ್ಯೆ 200 ತಲುಪಿದೆ. ಅವರು ಬೆಳೆದ ಹಳ್ಳಿಗೆ ಹತ್ತಿರವಿರುವ ಆಸ್ಪತ್ರೆಯನ್ನು ಅವರು ನೆನಪಿಸಿಕೊಳ್ಳುತ್ತಾರೆ. ಪ್ರತಿದಿನ ಕಾಯಿಲೆಗಳಿಂದ ಅಥವಾ ಇನ್ನೊಂದರಿಂದ 70 ಸಾವುಗಳಿಗೆ ಅವರು ಸಾಕ್ಷಿಯಾಗುತ್ತಿದ್ದರು. ಆದರೆ ಅದು ಎಂದಿಗೂ ಸುದ್ದಿಯಾಗಲಿಲ್ಲ, ಲಾಕ್ಡೌನ್ಗೆ ಎಂದಿಗೂ ಕಾರಣವಾಗಲಿಲ್ಲ. ಅವನು ಮಲಗಿದ್ದರೂ ನಿದ್ರಿಸಲು ಸಾಧ್ಯವಿಲ್ಲ.

ಆಹಾರ ಸರಬರಾಜುಗಾಗಿ ಮತ್ತೊಂದು ಸಮೀಕ್ಷೆಯ ಸಮಯ ಬಂತು. ಅವರು ಎಲ್ಲಾ ಕಾರ್ಮಿಕರ ಹೆಸರುಗಳು, ಆಧಾರ್ ಐಡಿ, ಉದ್ಯೋಗ ವಿವರ, ಉದ್ಯೋಗದಾತರ ಹೆಸರುಗಳು ಮತ್ತು ಆದಾಯದೊಂದಿಗೆ ಪಟ್ಟಿಯನ್ನು ತಯಾರಿಸುತ್ತಾರೆ. ಈ ಡೇಟಾದೊಂದಿಗೆ ಸರ್ಕಾರ ಏನು ಮಾಡುತ್ತದೆ ಎಂದು ಅವರು ಯೋಚಿಸುತ್ತಾನೆ. ಅವರ ವಿರುದ್ಧ ಬಳಸಿದರೆ? ಸಮೀಕ್ಷೆಯನ್ನು ಹರಿದು ಹಾಕಬೇಕೆಂದೆನಿಸುತ್ತದೆ. ಆದರೆ ತನ್ನನ್ನು ತಾನು ಸುಧಾರಿಕೊಳ್ಳುತ್ತಾನೆ.

ಅವನ ಗೊಡೌನ್ ಅನ್ನು ಸುತ್ತುವರೆದಿರುವ ಎತ್ತರದ ಅಪಾರ್ಟ್ಮೆಂಟ್ಗಳು ಮೌನವಾಗಿರುತ್ತವೆ. ಅಪಾರ್ಟ್ಮೆಂಟ್ ಒಂದಕ್ಕೆ ಅಡುಗೆ ಮಾಡುವ ಮತ್ತು ಸ್ವಚ್ಛಗೊಳಿಸುವ ಅವನ ನೆರೆಹೊರೆಯವಳು ಸಂಬಳವನ್ನು ಕೇಳಲು ಹೋದಾಗ ಗೇಟಿನ ಬಳಿ ಪ್ರವೇಶವನ್ನು ನಿರಾಕರಿಸಲಾಯಿತು. ನಿವಾಸಿಯೊಬ್ಬರು ಅವಳನ್ನು ಅನುಮಾನದಿಂದ ನೋಡಿದರು. ಅವರಂತಹ ಕಾರ್ಮಿಕರು ಈ ಪೂರ್ವಾಗ್ರಹವನ್ನು ಎದುರಿಸಬೇಕಾಗಿರುವುದರಲ್ಲಿ ಅವನಿಗೆ ಆಶ್ಚರ್ಯವೇನಿಲ್ಲ. 'ಸೋಷಿಯಲ್ ಡಿಸ್ಟೆನ್ಸ್' ಯಾವಾಗಲೂ ಅಸ್ತಿತ್ವದಲ್ಲಿತ್ತು.

ಅವರು ಅಪರಿಚಿತರ ದಾನದ ಮೇಲೆ ಅವಲಂಬಿತರಾಗಿರಬೇಕಾಗುತ್ತದೆ. ಸರಬರಾಜು ತುಂಬಿದ ಕಾರುಗಳು ಮತ್ತು ಟ್ರಕ್ಗಳು ಬರಲು ಪ್ರಾರಂಭಿಸುತ್ತವೆ. ಅಕ್ಕಿ, ದಾಲ್ ಮತ್ತು ಎಣ್ಣೆಯ ಪ್ಯಾಕೆಟ್ಗಳಲ್ಲಿ ಅವನ ಜೀವನವನ್ನು ಪ್ರಮಾಣೀಕರಿಸಲಾಗಿದೆ. ಪ್ರತಿ ಸುತ್ತಿನ ಪೂರೈಕೆಯೊಂದಿಗೆ, ಸುತ್ತಮುತ್ತಲಿನ ಜನರು ಹತಾಶರಾಗುತ್ತಾರೆ. ಮುಂದಿನ ಸುತ್ತಿನ ಸರಬರಾಜುಗಳು ಯಾವಾಗ ತಲುಪುತ್ತವೆ ಎಂಬುದರ ಬಗ್ಗೆ ಅನಿಶ್ಚಿತತೆಯಿದೆ. "ಅವನು ತನಗಿಂತ ಮೂರು ಚೀಲಗಳನ್ನು ಏಕೆ ಹೆಚ್ಚು ತೆಗೆದುಕೊಳ್ಳುತ್ತಿದ್ದಾನೆ?" ಎಂಬ ಅನುಮಾನ ಮತ್ತು ಅಸಮಾಧಾನವಿದೆ. ಅವನ ಪಕ್ಕದ ಮನುಷ್ಯ ನಿರ್ಜಲೀಕರಣದಿಂದಾಗಿ ಮೂರ್ಛೆಹೋಗುತ್ತಾನೆ. ಇತರರು ತಮ್ಮ ಚೀಲಗಳನ್ನು ಅನ್ನದಿಂದ ತುಂಬಿಸಿಕೊಳ್ಳಲು ಅವನನ್ನು ವೇಗದಿಂದ ಸಾಲಿನಿಂದ ತೆಗೆದುಹಾಕುತ್ತಾರೆ. ಅವನು ಇನ್ನೊಂದು ದಿನ ಕಾಯಬೇಕಾಗುತ್ತದೆ. ಆ ರಾತ್ರಿ, ಅವನು ತನ್ನ ನೆರೆಹೊರೆಯವರೊಂದಿಗೆ ಊಟವನ್ನು ಹಂಚಿಕೊಳ್ಳುತ್ತಾನೆ. ಅವರು ಮೌನವಾಗಿ ತಿನ್ನುತ್ತಾರೆ.

ಕಾರ್ಮಿಕರಿಗಾಗಿ ಹೊಸ ಯೋಜನೆಗಳನ್ನು ಸುದ್ದಿಯಲ್ಲಿ ಪ್ರಕಟಿಸಲಾಗಿದೆ. ತನ್ನ ಜನರನ್ನು ಇನ್ನೂ ಬಳಲಿಸಲು ಈ ವೈರಸ್ ಅನ್ನು ದೊಡ್ಡ ಜಾಲದಲ್ಲಿ ಬಳಸಲಾಗುತ್ತಿದೆ ಎಂದು ಶಂಕಿಸುತ್ತಾನೆ. ಸಂಜೆ 5 ಗಂಟೆಗೆ ಮಧ್ಯಾಹ್ನದ ಆಹಾರಕ್ಕಾಗಿ ತಯಾರಿಸಿದ ಊಟ ತುಂಬಿದ ಆಟೋ ಬಂದಿದೆ. ದಿನಕ್ಕೆ ಒಂದು ಪ್ಯಾಕೆಟ್. ಅವನು ಚೀಲವನ್ನು ತೆರೆಯುತ್ತಾನೆ, ಆಹಾರ ಹಳಸಿದೆ. ಹಸಿವಿಗಿಂತ ಮಾರಕವಾದುದು ಏನಾದರೂ ಇದೆಯೇ? ಅವನು ಪ್ಯಾಕೆಟ್ ಅನ್ನು ಎಸೆಯುತ್ತಾನೆ.

ಅವನು ಮತ್ತು ಅವನ ಸ್ನೇಹಿತರು ಬೀಡಿ ಸೇದಲು ರಸ್ತೆಯ ಬಳಿ ಹೋಗುತ್ತಾರೆ. ಸುಮ್ಮನೆ ನಿಂತು ನಗರದತ್ತ ಕಣ್ಣು ಹಾಯಿಸುವುದು ಹೊಸ ಭಾವನೆ. ಅವರು ತಮ್ಮ ನಡುವೆ ಬೀಡಿಯನ್ನು ಹಂಚಿಕೊಳ್ಳುತ್ತ, ಖಾಲಿ ಬೀದಿ ಮತ್ತು ನಿರ್ಬಂಧಿತ ಕವಾಟುಗಳನ್ನು ನೋಡುತ್ತಾರೆ. ಮೇಲಿನ ಬಾಲ್ಕನಿಯಿಂದ ಮುಖವಾಡ ಧರಿಸಿದ್ದ ವ್ಯಕ್ತಿಯೊಬ್ಬ ಅಂತರ ಕಾಯ್ದುಕೊಳ್ಳುವಂತೆ ಕಿರುಚುತ್ತಾನೆ. ಅವನು ಬೀಡಿಯನ್ನು ಆರಿಸುತ್ತಾನೆ. ಆ ರಾತ್ರಿ ಸರ್ಕಾರವು ಬಾಂಬ್ಗಳನ್ನು ವೈರಸ್ ಅಯುಧದೊಂದಿಗೆ ಬದಲಾಯಿಸಿದಂತೆ ಅವನು ಕನಸು ಕಾಣುತ್ತಾನೆ.



ಬೆವರು ಪತ್ರಿಕೆಯು ಬೆಂಗಳೂರಿನ ಕಾರ್ಮಿಕರ ಧ್ವನಿ, ನೋಟ ಮತ್ತು ಅನುಭವಗಳಿಗಾಗಿ ಮೀಸಲಾಗಿದೆ. ಈ ಪತ್ರಿಕೆಯು ಅಸಂಘಟಿತ ವಿಭಾಗಗಳ ಕಾರ್ಮಿಕರ ಮೇಲೆ ಕೇಂದ್ರೀಕರಿಸುತ್ತದೆ. ಕಾರ್ಯದ ಮೇಲಿನ ನಿಮ್ಮ ಬರಹಗಳು, ಕವಿತೆಗಳು, ಹಾಡುಗಳು ಮತ್ತು ಆಶಯಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಿ. ನಿಮ್ಮ ಸಲಹೆ, ಸೂಚನೆ ಮತ್ತು ಅಭಿಪ್ರಾಯಗಳನ್ನು ನಮಗೆ ತಿಳಿಸಿ.

'ಬೆವರು'ವಿನ ಈ ವಿಶೇಷ ಸಂಚಿಕೆಯಲ್ಲಿ ನಾವು ಕೋವಿಡ್ 19ನ ಲಾಕ್‌ಡೌನ್‌ನ ಸಮಯದಲ್ಲಿನ ವಲಸೆ ಕಾರ್ಮಿಕರ ಅನುಭವಗಳನ್ನು ಎತ್ತಿಹಿಡಿದಿದ್ದೇವೆ. ಎಲ್ಲಾ ಲೇಖನಗಳನ್ನು ಮರಾ ತಂಡದವರು ಬರೆದಿದ್ದಾರೆ.

ಮರಾ, 2008ರಿಂದ ಬೆಂಗಳೂರಿನಲ್ಲಿ ಆಧಾರಿತವಾದ ಒಂದು ಮಾಧ್ಯಮ ಮತ್ತು ಕಲಾ ಸಮೂಹ. ಸಮಾಜದ ಅಂಚಿನಲ್ಲಿರುವವರ ಧ್ವನಿಯನ್ನು ಎತ್ತಿಹಿಡಿಯುತ್ತಾ, ಕಾರ್ಮಿಕರ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದೆಡೆಗೆ ಈ ಸಮೂಹವು ಕೆಲಸ ಮಾಡುತ್ತದೆ. ಬಹಿಷ್ಕಾರ, ಹೋರಾಟ ಮತ್ತು ಸ್ಥಿತಿಸ್ಥಾಪಕತ್ವದ ಕಥೆಗಳನ್ನು ಪ್ರತಿನಿಧಿಸುತ್ತ, ಅಭಿವೃದ್ಧಿಗೊಳ್ಳುತ್ತಿರುವ ನಗರದ ಕಲ್ಪನೆಗೆ ಸವಾಲೊಡ್ಡುತ್ತೇವೆ.

**ಇಂಗ್ಲಿಷ್ ಲೇಖನಗಳು:** ಅಂಗಾರಿಕ ಜಿ, ಅನುಷಿ ಅಗರ್ವಾಲ್, ಏಕ್ತಾ ಎಮ್, ನಿಹಾಲ್ ಪಸಾನ್ನ

**ಹಿಂದಿ ಅನುವಾದ:** ಅನುಷಿ ಅಗರ್ವಾಲ್

**ಕನ್ನಡ ಅನುವಾದ:** ಮಹಿಮಾ ಗೌಡ

**ಚಿತ್ರ ಮತ್ತು ವಿನ್ಯಾಸ:** ತಾರಾ ಎಮ್ ಥಾಮಸ್

**ಸಂಪರ್ಕಿಸಿ:** ಏಕ್ತಾ ಎಮ್ - 9880755875
ಅಂಗಾರಿಕ ಜಿ - 9880159484

# ಹಿಂದಿರುಗಲಾರದ ಹಂತ

"ನಾನು ಒಂದು ತುದಿಯಿಂದ ಇನ್ನೊಂದು ತುದಿಗೆ ನಡೆಯುತ್ತೇನೆ. ನಮ್ಮಲ್ಲಿ ಕೆಲವರು ಒಂದು ಗಂಟೆ ಅಥವಾ ಎರಡು ಗಂಟೆಗಳ ಕಾಲ ರಸ್ತೆಯ ಪಕ್ಕದಲ್ಲಿ ಕುಳಿತುಕೊಳ್ಳುತ್ತಾರೆ, ನಂತರ ನಾವು ಟೆರೇಸ್ನಲ್ಲಿ ನಡೆಯುತ್ತೇವೆ. ಬೇಗನೆ ಮನೆಗೆ ಹೋಗಲಿಕ್ಕೆ ಲಾಕ್ಡೌನ್ ಮುಗಿಯುವಂತೆ ನಾವು ಪ್ರಾರ್ಥಿಸುತ್ತಿದ್ದೇವೆ. ಇಲ್ಲಿ ನಮಗೆ ಏನು ಉಳಿದಿದೆ? "
ನಗರದಾದ್ಯಂತ ಕಾಂಕ್ರೀಟ್ ಅಸ್ಥಿಪಂಜರಗಳ ರಾಶಿ. ಬೆಂಗಳೂರಿನಲ್ಲಿ ಸದಾ ಬೆಳೆಯುತ್ತಿರುವ ಜನಸಂಖ್ಯೆಗಾಗಿ ಹಾಕಿರುವ ಗೃಹಗಳ ಅಡಿಪಾಯಗಳಿವು. ಇವು ಕೇವಲ ತಯಾರಿಕೆಯಲ್ಲಿರುವ ಮನೆಗಳಲ್ಲ. ಅವರು ಇಲ್ಲಿ ಬದುಕುತ್ತಾರೆ. ಸಿಮೆಂಟ್ ಮತ್ತು ಇಟ್ಟಿಗೆಯ ಮುಕ್ತ ರಚನೆಗಳಿವು. ಗೋಡೆಗಳಿಲ್ಲ, ಕಿಟಕಿಗಳಿಲ್ಲ, ಶೌಚಾಲಯಗಳಿಲ್ಲ. ನೀರನ್ನು ಬೋರ್ವೆಲ್ಲಿಂದ ಪಡೆಯಲಾಗುತ್ತದೆ. ಈ ರಚನೆಗಳ ಒಳಗೆ ಮತ್ತು ಹೊರಗೆ ಸಡಿಲವಾಗಿ ಚದುರಿದ ಕಟ್ಟಡ ಸಾಮಗ್ರಿಗಳೆಂದರೆ - ಇಟ್ಟಿಗೆಗಳು, ಸಿಮೆಂಟ್ ಪುಡಿ, ಪ್ಲ್ಯಾಸ್ಟರ್. ಇವು ಅಲಂಕೃತವಾಗಿ ಕಂಡರೂ ಗಮನಾರ್ಹ ಪ್ರಮಾಣದ ಧೂಳಿಗೆ ಕಾರಣವಾಗಿವೆ. ಅವುಗಳಿನ್ನು ಜಾಹೀರಾತಿನಲ್ಲಿ ತೋರಿಸಿದ ಅತ್ಯಾಧುನಿಕ ಮನೆಗಳಾಗಿಲ್ಲ. ಇದು ಸದ್ಯಕ್ಕೆ ಅವರ ಮನೆ.

ಪ್ರತಿಯೊಂದು ಸೈಟ್ ಅನ್ನು ಬೇರೆ ಬೇರೆ ಮಾಲೀಕರು ಮತ್ತು ಗುತ್ತಿಗೆದಾರರೊಂದಿಗೆ ಪ್ರತ್ಯೇಕಿಸಲಾಗುತ್ತದೆ. ಅವರು ದೂರದಿಂದ ಬಂದವರು: ಬಿಹಾರ, ಜಾರ್ಖಂಡ್, ಬಂಗಾಳ, ಉತ್ತರ ಪ್ರದೇಶ ಮತ್ತು ಒರಿಸ್ಸಾ. ಗುತ್ತಿಗೆದಾರರಿಂದ ಆಮಿಷಕ್ಕೊಳಗಾಗಿ ಅವರು ಕೆಲಸ, ಹಣ ಮತ್ತು ಉತ್ತಮ ಜೀವನವನ್ನು ಕಂಡುಕೊಳ್ಳುವ ಭರವಸೆಯೊಂದಿಗೆ ಬಹಳ ದೂರ ಪ್ರಯಾಣಿಸುತ್ತಾರೆ. ಅವರು ಸ್ಥಳೀಯ ಭಾಷೆಯನ್ನು ಮಾತನಾಡುವುದಿಲ್ಲ. ಅವರನ್ನು ನೋಂದಾಯಿಸಲಾಗುವುದಿಲ್ಲ. ಅವರು ನಗರದ ಯಾವುದೇ ಯೂನಿಯನ್‌ನ ಭಾಗವಲ್ಲ. ಕಾರ್ಮಿಕರು ನಗರವನ್ನು ಗುರುತಿಸುವುದಿಲ್ಲ, ನಗರವು ಕಾರ್ಮಿಕರನ್ನು ಗುರುತಿಸುವುದಿಲ್ಲ.
"ಎಂದಿನಂತೆ ನಮ್ಮಲ್ಲಿ 10 ಮಂದಿ ಬೆಳಿಗ್ಗೆ 8 ಗಂಟೆಗೆ ಕೆಲಸಕ್ಕಾಗಿ ಕೊಠಡಿಯನ್ನು ಬಿಟ್ಟರು. ಆದರೆ ಯಾವುದೇ ಸಾರಿಗೆ ವ್ಯವಸ್ಥೆಯಿರಲಿಲ್ಲ. ಎಲ್ಲಾ ಬೀದಿಗಳು ಖಾಲಿಯಾಗಿದ್ದವು. ನಿಮ್ಮ ಮನೆಗಳಿಗೆ ಹಿಂತಿರುಗಿ ಅಥವಾ ನಿಮ್ಮನ್ನು ಲಾಕ್ ಮಾಡುತ್ತೇವೆ ಎಂದು ಪೊಲೀಸರು ನಮ್ಮ ಬೆನ್ನಟ್ಟಿದ್ದರು. ನಾವು ನಮ್ಮ ಗುತ್ತಿಗೆದಾರನನ್ನು ಕರೆದೆವು, ಎಲ್ಲಾ ಕೆಲಸಗಳನ್ನು 21 ದಿನಗಳವರೆಗೆ ನಿಲ್ಲಿಸಬೇಕು ಎಂದು ಅವರು ಹೇಳಿದರು. "

ಕೆಲಸವಿಲ್ಲದೆ, ಈ ನಗರವು ಮನೆಯಂತೆ ಭಾಸವಾಗುವುದಿಲ್ಲ. ಇವರು ಶ್ರೀಮಂತರೊಂದಿಗೆ ವಾಸಿಸುತ್ತಾರೆ. ಅವರು ಬೆಳಿಗ್ಗೆ ಜಾಗಿಂಗ್ ಅಥವಾ ನೆರೆಹೊರೆಯ ಸುತ್ತಲೂ ನಡೆಯುವುದನ್ನು ನೋಡುತ್ತಾರೆ. ಎಷ್ಟೊಂದು ಕಾರುಗಳು. ಇವರು ಎಲ್ಲಿಂದ ಬಂದಿದ್ದಾರೆಂದು ಯಾರೂ ಕೇಳಿಲ್ಲ. ಪ್ರತಿ ಕಟ್ಟಡದೊಂದಿಗೆ ಗುತ್ತಿಗೆದಾರರು ಬದಲಾಗುತ್ತಾರೆ. ಕಾರ್ಮಿಕರಿಗೆ ಪ್ರತಿದಿನ ಮತ್ತು ಕೆಲವೊಮ್ಮೆ ವಾರಕ್ಕೊಮ್ಮೆ ಸಂಬಳ ನೀಡಲಾಗುತ್ತದೆ. ಅವರು ಮನೆಗೆ ಸಾಧ್ಯವಾದಷ್ಟು ಹಣ ಕಳುಹಿಸುತ್ತಾರೆ, ಉಳಿದದ್ದನ್ನು ತಮ್ಮ ದೈನಂದಿನ ವೆಚ್ಚಗಳಿಗೆ ಬಳಸುತ್ತಾರೆ. ಅವರ ಕುಟುಂಬಸ್ಥರು ಇವರ ಆದಾಯದ ಮೇಲೆ ಪೂರ್ಣವಾಗಿ ಅವಲಂಬಿತರಾಗಿರುತ್ತಾರೆ.

"ನಾವು ಹೊರಗೆ ನಡೆಯುತ್ತೇವೆ, ಆದರೆ ದೂರ ಹೋಗುವುದಿಲ್ಲ. ಇಲ್ಲಿ ವಾಸಿಸುವ ಶ್ರೀಮಂತ ಜನರು ನಮ್ಮನ್ನು ಅನುಮಾನಾಸ್ಪದವಾಗಿ ನೋಡುತ್ತಾರೆ. ನಾವು ನಿರ್ಮಾಣ ಸ್ಥಳದ ಒಳಗೆ ನಡೆಯುತ್ತೇವೆ. ಹೇಗಿದ್ದರೂ, ನಾವು ಇಲ್ಲಿಗೆ ಬಂದಿರುವುದು ಕೆಲಸ ಮಾಡಲಿಕ್ಕೆ."

ಕಠಿಣ ದಿನದ ಕೆಲಸದ ನಂತರ, ಆಹಾರವು ಮನೆಯ ಏಕೈಕ ನೆನಪು. ಅವರು ಅಡುಗೆಯನ್ನು ಬಹಳ ಕಾಳಜಿಯಿಂದ ತಯಾರಿಸಿ, ಒಟ್ಟಿಗೆ ತಿನ್ನುತ್ತಾರೆ. ಇತರ ರಾಜ್ಯಗಳ ಜನರು ವಿಭಿನ್ನ ಅಭಿರುಚಿ ಹೊಂದಿದ್ದು, ಪ್ರತ್ಯೇಕವಾಗಿ ತಿನ್ನುತ್ತಾರೆ. ಈಗ ಅವರು ದಿನಕ್ಕೆ ಒಂದು ಹೊತ್ತಿನ ಊಟದ ಮೇಲೆ ಬದುಕುತ್ತಿದ್ದಾರೆ. "ನೀವು ಹೊಂದಿಕೊಳ್ಳಬೇಕು," ಎಂದು ಗುತ್ತಿಗೆದಾರ ಹೇಳಿದರು. ಅವರಿಗೆ ಕಾಯುವುದನ್ನು ಬಿಟ್ಟರೆ ಬೇರೆ ದಾರಿ ಇಲ್ಲ.

"ನನ್ನ ದೇಹವು ಇಡೀ ದಿನ ಸುಮ್ಮನೆ ಕುಳಿತುಕೊಳ್ಳುವುದರಿಂದ ನೋವಾಗುತ್ತದೆ. ನಾವು ಲುಡೋ ಆಡುತ್ತೇವೆ ಅಥವಾ ಮೊಬೈಲ್ ನಲ್ಲಿ ವೀಡಿಯೊಗಳನ್ನು ನೋಡುತ್ತೇವೆ. ಆದರೆ ಭವಿಷ್ಯದ ಬಗ್ಗೆ ನಿರಂತರ ಚಿಂತಿಸುತ್ತಿರುತ್ತೇವೆ. ಈ ತಿಂಗಳ ಬಾಡಿಗೆ ಹೇಗೆ ಕಟ್ಟುವುದು? ನಾನು ಮನೆಗೆ ಹೇಗೆ ಹೋಗುತ್ತೇನೆ, ಹೇಗೆ ಹಣವನ್ನು ಪಡೆಯುತ್ತೇನೆ? "
ಅವರುಹೊರಬರುವುದನ್ನು ನೋಡಿದರೆಅವರನ್ನು ಜೈಲಿಗೆ ಹಾಕುತ್ತೇವೆ ಎಂದು ಪೊಲೀಸರು ಬೆದರಿಕೆ ಹಾಕುತ್ತಾರೆ. ಅವರಿಗೆಉಪಯೋಗಕ್ಕೆ,ಕಲ್ಯಾಣಮತ್ತುಸುರಕ್ಷತೆಯ ಕಾಳಜಿ ವಹಿಸುವ ಯಾವುದೇ ಯೋಜನೆಗಳ ಬಗ್ಗೆ ತಿಳಿದಿಲ್ಲ. ಗುತ್ತಿಗೆ ಕಾರ್ಮಿಕರಾದ್ದರಿಂದ, ಅವರನ್ನು ಉದ್ಯೋಗದಾತರೊಂದಿಗಿನ ಯಾವುದೇ ನೇರ ಸಂಪರ್ಕದಿಂದ ಕಡಿತಗೊಳಿಸಬಹುದು. ಕೆಲಸಗಾರನು ಗುತ್ತಿಗೆದಾರರಿಂದ ಏನು ಪಡೆಯುತ್ತಾನೋ ಅದರಲ್ಲಿ ತೃಪ್ತಿ ಪಡೆಯಬೇಕು. ಇದಕ್ಕಿಂತ ಹೆಚ್ಚಿಲ್ಲ, ಕಡಿಮೆಯಿಲ್ಲ. ಯಾರೂ ಅವರಿಗೆ ಜವಾಬ್ದಾರರಲ್ಲ.

"ಈ ಲಾಕ್ಡೌನ್ನಿಂದ, ಇದ್ದಕ್ಕಿದ್ದಂತೆ ನಮ್ಮನ್ನು ಒಂಟಿತನ ಕಾಡುತ್ತಿದೆ. ನಾವು ಇಲ್ಲಿ ವಾಸಿಸುತ್ತಿದ್ದೇವೆಂದು ನಗರದಲ್ಲಿ ಯಾರಿಗೂ ತಿಳಿದಿಲ್ಲ. ನಾವು ಯಾರಿಗೆಂದು ಕೈಚಾಚಬೇಕು? ನಾನು ನನ್ನ ಕುಟುಂಬದವರಿಗೆ ಕರೆ ಮಾಡುವುದನ್ನು ನಿಲ್ಲಿಸಿದ್ದೇನೆ, ಮಾತ್ತೆತ್ತಿದರೆ ಅವರು ಅಳಲಾರಂಭಿಸುತ್ತಾರೆ. ನಾನು ಇಲ್ಲಿ ಚೆನ್ನಾಗಿದ್ದೇನೆ ಎಂದು ಅವರಿಗೆ ಹೇಳುತ್ತೇನೆ. ಅವರಿಗೆ ಇನ್ನೇನು ಹೇಳುವುದು? "
ಅವರು ತಮ್ಮ ಫೋನ್ಗಳಲ್ಲಿ ಸಂಗೀತ ಕೇಳುತ್ತಾ, ಆಟವಾಡುತ್ತಾ ಹೆಚ್ಚಿನ ಸಮಯವನ್ನು ಕಳೆಯುತ್ತಾರೆ; ಫೋನಿನ ಕರೆನ್ಸಿ ಶೀಘ್ರದಲ್ಲೇ ಮುಗಿಯುತ್ತದೆ. ಸದ್ಯಕ್ಕೆ ಅವರು ತಮ್ಮ ಕುಟುಂಬದೊಂದಿಗೆ ಮಾತನಾಡಬಹುದು. ಕೆಲವು ದಿನಗಳಲ್ಲಿ ಅವರಿಗೆ ಮಿಸ್ಡ್ ಕಾಲ್ಗಳನ್ನು ನೀಡಬೇಕಾಗುತ್ತದೆ. ಅವರಿಗೆ ಬೇಸರವಾಗಿದೆ. ಅವರು ಕೆಲಸ ಮಾಡಲು ಅಥವಾ ಮನೆಗೆ ಹಿಂದಿರುಗಲು ಇಚ್ಛಿಸುತ್ತಾರೆ. ಮನೆಯವರು ಅವರ ಕರೆಗಳಿಗೆ ಉತ್ತರಿಸುವುದನ್ನು ನಿಲ್ಲಿಸಿದ್ದಾರೆ. ಎಲ್ಲಾ ರೈಲುಗಳನ್ನು ರದ್ದುಪಡಿಸಲಾಗಿದೆ. ಹಸಿವು ಮರಳಿ ಬರುತ್ತದೆ.

ಅವರು ಕಾಯುವುದರಿಂದ ದಣಿದಿದ್ದಾರೆ. ಅವರಲ್ಲಿ ಒಂದು ಗುಂಪು ಮಾಲೀಕರ ಮನೆಗೆ ಹೋಗಲು ನಿರ್ಧರಿಸುತ್ತದೆ. ಮಾಲೀಕರು ಅವರಿಗೆ ರೂ. 200 / - ನೀಡಿ, ಬಾಕಿ ಹಣವನ್ನು, ಲಾಕ್ಡೌನ್ ಮುಗಿದ ನಂತರ ಪಾವತಿಸಲಾಗುವುದು ಎಂದು ಹೇಳುತ್ತಾರೆ. ಅವರಲ್ಲಿ ಕೆಲವರು ಕೋಪಗೊಂಡಿದ್ದಾರೆ, ಇತರರು ಸುಮ್ಮನಿದ್ದಾರೆ.

"ನಾನು ಮನೆಗೆ ಹೋದರೆ ಕಡೇಪಕ್ಷ ನಾನು ನನ್ನ ಜನರ ಮಧ್ಯೆ ಇರುತ್ತೇನೆ. ಹಸಿವಿನ ಬಗ್ಗೆ ಯೋಚಿಸಬೇಕಾಗಿಲ್ಲ. ಭಿಕ್ಷೆ ಬೇಡ ಬೇಕಾಗಿಲ್ಲ. ನನಗೆ ಬೇಕಾಗಿರುವುದು ನಾನು ದುಡಿದ ಹಣ. ಇದು ಮುಗಿದ ನಂತರ ನಾನು ಮನೆಗೆ ಹೋಗುತ್ತೇನೆ. ಮತ್ತೆಂದೂ ಹಿಂತಿರುಗುವುದಿಲ್ಲ."

ಕಾರ್ಮಿಕರಿಗೂ ನಗರದಲ್ಲಿ ಅವರು ನಿರ್ಮಿಸುವ ವಸ್ತುಗಳಿಗೂ ಹೆಚ್ಚಿನ ಸಂಬಂಧವಿಲ್ಲ. ಅವರು ಅಂಚಿನಲ್ಲಿ ವಾಸಿಸುತ್ತಾರೆ. ಇಂದು, ಹಲವಾರು ಅರ್ಧ ನಿರ್ಮಿತ ಕಟ್ಟಡಗಳು ಮತ್ತು ತೊರೆದ ಮನೆಗಳು ಅವುಗಳನ್ನು ಪೂರ್ಣಗೊಳಿಸುವ ಕೈಗಳಿಗಾಗಿ ಕಾಯುತ್ತಿವೆ. ಅವರು ನಗರದ ಸುಳ್ಳು ಭರವಸೆಗಳಿಗೆ ಸಾಕ್ಷಿಯಾಗಿ ನಿಲ್ಲುತ್ತಾರೆ.

## ಕಾಣೆಯಾಗಿದ್ದಾರೆ

ನನ್ನ ಹೆಸರು ಸುರೇಂದರ್ ಯಾದವ್. ನನ್ನ ವಯಸ್ಸು ಸುಮಾರು 45 ವರ್ಷ. ನಾನು ಬಿಳಿ ಶರ್ಟ್ನೊಂದಿಗೆ ನನ್ನ ಕುತ್ತಿಗೆಯಲ್ಲಿ ನೀಲಿ ತವೀಜ್ ಧರಿಸಿದ್ದೇನೆ. ನಾನು 5 ಅಡಿ 6 ಇಂಚು ಎತ್ತರ, ಮತ್ತು ನನ್ನದು ಗೋಧಿ-ಕಂದು ಬಣ್ಣ. ನನ್ನ ಸಹೋದರನೊಂದಿಗೆ ಮೆಟ್ರೊದಲ್ಲಿ ಕೆಲಸ ಮಾಡಲು ಫೆಬ್ರವರಿಯಲ್ಲಿ ಬೆಂಗಳೂರಿಗೆ ಬಂದೆ. ಬನ್ನೇರುಘಟ್ಟ ಲೈನಿನಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಮಾರ್ಚ್ 20 ರಂದು ರಾತ್ರಿ 8 ಗಂಟೆಗೆ ನಾಪತ್ತೆಯಾದೆ. ನಾನು ಕೆಲಸದಿಂದ ಕಾರ್ಮಿಕರ ಕಾಲೋನಿಗೆ ಹಿಂದಿರುಗುತ್ತಿದ್ದಾಗ, ದಾರಿ ತಪ್ಪಿದೆ. ನನ್ನ ಸಹೋದರ ನನ್ನನ್ನು ತಲುಪಲು ಪ್ರಯತ್ನಿಸುತ್ತಿದ್ದಾನೆ. ನನ್ನ ಬಳಿ ಸೆಲ್ ಫೋನ್ ಇಲ್ಲ. ಕಂಪನಿಯು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ನನ್ನ ಬಗ್ಗೆ ಇನ್ನೂ ಯಾವುದೇ ಸುಳಿವಿಲ್ಲ. ನನ್ನ ಮನೆಯವರು ತುಂಬಾ ಚಿಂತಾಕ್ರಾಂತರಾಗಿದ್ದಾರೆ. ಇದ್ದಕ್ಕಿದ್ದಂತೆ, ಬೀದಿಯಲ್ಲಿ ಯಾರೂ ಇಲ್ಲ, ವಾಹನಗಳ ಶಬ್ದವಿಲ್ಲ. ಹಲವಾರು ನಾಯಿಗಳು ಮಾತ್ರ ಬೀದಿಯಲ್ಲಿ ಕಂಡುಬರುತ್ತವೆ. ಎಲ್ಲರೂ ಕಾಣೆಯಾಗಿದಂತೆ ತೋರುತ್ತದೆ. ನೀವು ನನ್ನನ್ನು ಎಲ್ಲಿಯಾದರೂ ಕಂಡರೆ, ದಯವಿಟ್ಟು 9880755875 ಗೆ ಕರೆ ಮಾಡಿ.

ಇದು ಹುಳಿಮಾವು ಪೊಲೀಸ್ ಠಾಣೆಯಲ್ಲಿ ನೋಂದಾಯಿಸಿದ ನಿಜವಾದ ದೂರು. ನಗರದ ಹಲವಾರು ಕಾರ್ಮಿಕರು ನಾಪತ್ತೆಯಾಗಿದ್ದಾರೆ, ಕೆಲವರು ದೂರುಗಳನ್ನು ನೋಂದಾಯಿಸಿದ್ದರೆ, ಇತರರ ನಾಪತ್ತೆಯ ದೂರು ದಾಖಲಾಗಿಲ್ಲ. ಅವರನ್ನು ಇಂದಿಗೂ ಹುಡುಕಲಾಗುತ್ತಿದೆ, ಅವರ ಕುಟುಂಬದ ಸದಸ್ಯರು ಅವರಿಗಾಗಿ ಕಾಯುತ್ತಿದ್ದಾರೆ.





# ನೆಮ್ಮದಿಯಿಂದ ಮಲಗುವುದು

ಅವಳಿಗೆ ಬೆಳಿಗ್ಗೆಯಿಂದ ತಲೆನೋವು ಇದೆ. ಅವಳಿಗೆ ಕಳೆದ ರಾತ್ರಿ ಮಲಗಲು ಸಾಧ್ಯವಾಗಲಿಲ್ಲ. ಅವಳು ತಡವಾಗಿ ಎಚ್ಚರಗೊಂಡು ಕಡಿಮೆ ಹಾಲಿನೊಂದಿಗೆ ಚಹಾದ ಸಣ್ಣ ಕಪ್ ಮಾಡಿಕೊಂಡಳು. ಅವಳ ಪತಿ, ಮನೆಯ ಹೊರಗೆ ಕುಳಿತು ರಸ್ತೆಯನ್ನು ನೋಡುತ್ತಿರುವುದನ್ನು ಕಂಡಳು. ಮಾಡಲು ಏನೂ ಇಲ್ಲ, ದಿನದ ಯೋಜನೆ ಇಲ್ಲ. ಅವಳು ತನ್ನ ಮಕ್ಕಳಿನ ಆಹಾರದ ಪ್ಯಾಕೆಟ್ಗಳಿಗಾಗಿ ಕಾಯುತ್ತಾಳೆ.

ಐದು ವರ್ಷಗಳ ಹಿಂದೆ ತನ್ನ ಮಕ್ಕಳೊಂದಿಗೆ ಬೆಂಗಳೂರಿಗೆ ಬಂದಳು. ಅವಳ ಪತಿ ಇಲ್ಲಿ ನಿರ್ಮಾಣ ಕೆಲಸಗಾರನಾಗಿ ಕೆಲಸ ಮಾಡುತ್ತಾನೆ. ಅವಳು ಮೊದಲ ಬಾರಿಗೆ ರೈಲು ಹತ್ತಿದಳು. ನಗರಕ್ಕೆ ಬಂದದ್ದು ಮೊದಲು ಬಾರಿಗೆ. ಇದೆಲ್ಲವೂ ಅವಳಿಗೆ ಹೊಸತಾಗಿತ್ತು: ಬಾಡಿಗೆ ಮನೆಯಲ್ಲಿ ವಾಸಿಸುವುದು, ಅವಳ ಗಂಡನ ಮನೆಯವರಿಂದ ಮೇಲ್ವಿಚಾರಣೆ ಇಲ್ಲದಿರುವುದು, ಕೇವಲ ನಾಲ್ಕು ಜನರಿಗೆ ಅಡುಗೆ ಮಾಡುವುದು, ವಿವಿಧ ಭಾಷೆಗಳನ್ನು ಮಾತನಾಡುವ, ವಿವಿಧ ರೀತಿಯ ಆಹಾರವನ್ನು ಸೇವಿಸುವ ಜನರಿಂದ ಸುತ್ತುವರೆದಿರುವುದು. ಬೆಳಿಗ್ಗೆ 11 ಗಂಟೆ, ಮಕ್ಕಳು ಇನ್ನೂ ನಿದ್ದೆ ಮಾಡುತ್ತಿದ್ದಾರೆ. ಅವಳು ತನ್ನ ಹಿರಿಯ ಮಗನನ್ನು ಎಚ್ಚರಿಸಿ ಆಹಾರ ಪ್ಯಾಕೆಟ್ಗಳನ್ನು ವಿತರಿಸುತ್ತಿದ್ದಾರೆಯೇ ಎಂದು ನೋಡಿಕೊಂಡು ಬರಲು ಕಳಿಸುತ್ತಾಳೆ. ಎಷ್ಟು ರೇಷನ್ ಉಳಿದಿದೆ ಎಂದು ಪರೀಕ್ಷಿಸಲು ಅವಳು ಅಡಿಗೆ ಮನೆಗೆ ಹೋಗುತ್ತಾಳೆ. ಕೇವಲ ಮೂರು ದಿನಗಳವರೆಗೆ ಆಗುತ್ತದೆಯಷ್ಟೇ. ದಿನಕ್ಕೆ ಸಾಮಾನ್ಯವಾಗಿ ಒಂದು ಹೊತ್ತಿನ ಅಥವಾ ಎರಡು ಹೊತ್ತಿನ ಊಟಕ್ಕೆ ದಾಲ್ ಮತ್ತು ರೊಟ್ಟಿಯಿಂದ ಅವರು ಸಂಭಾಳಿಸುತ್ತಾರೆ.

ಅವಳು ಇಲ್ಲಿಗೆ ಬಂದ ನಂತರ, ಮನೆ ನಡೆಸಲು ಕೆಲಸಕ್ಕೆ ಹೋಗಬೇಕಾಯಿತು. ಅವಳ ಮೊದಲ ಕೆಲಸ ಬೆಂಗಳೂರಿನ ಗಾರ್ಮೆಂಟ್ ಕಾರ್ಖಾನೆಯೊಂದರಲ್ಲಿ. ಅದು ಮುಚ್ಚಿದಾಗ, ಅವಳು ಮನೆಗೆಲಸದವಳಾಗಿ ಕೆಲಸ ಮಾಡಲು ಪ್ರಾರಂಭಿಸಿದಳು. ಅವಳಿಗೆ ಕೆಲಸ ಮಾಡುವುದು ಇಷ್ಟ. ಒಂದು ದಿನದ ಕೆಲಸದ ನಂತರ ನೆಮ್ಮದಿಯ ನಿದ್ದೆ ಮಾಡಬಹುದು. ಕೆಲಸ ಮಾಡದಿದ್ದರೆ, ಏನು ಉಣ್ಣಲಾಗುತ್ತದೆ?

ಆಕೆಯ ಪತಿ ಮತ್ತು ಮಕ್ಕಳು ಬೇಗನೆ ಮಲಗುತ್ತಾರೆ. ಅವಳು ಕಣ್ಣು ಮಿಟುಕಿಸದೆ ಗೋಡೆಗಳನ್ನು ನೋಡುತ್ತಾ ಕುಳಿತಿದ್ದಾಳೆ. ಮಧ್ಯಾಹ್ನದ ಬಿಸಿಲಿನಲ್ಲಿ ಮಲಗಿರುವ ತನ್ನ ಕುಟುಂಬವನ್ನು ನೋಡಿದಾಗ ಕೋಣೆ ಇನ್ನೂ ಚಿಕ್ಕದಾಗಿರುವಂತೆ ಕಾಣುತ್ತದೆ. ಅವಳಿಗೆ ಉಸಿರುಗಟ್ಟಿದಂತಾಗುತ್ತದೆ. ಹೆದರಿಕೊಂಡು ಶಿವನ ಭಜನೆಗಳನ್ನು ಹಾಡುತ್ತಾಳೆ. ಅವಳಿಗೆ ಮೊಬೈಲ್ ಫೋನ್ ಅನ್ನು ಹೇಗೆ ಬಳಸಬೇಕೆಂದು ತಿಳಿದಿಲ್ಲ, ಅನವಶ್ಯಕ ಗೊಂದಲಗಳಿಲ್ಲ.

ಸಂಜೆ 6 ಗಂಟೆಗೆ, ತನ್ನ ನೆರೆಹೊರೆಯವರು ಆಹಾರದ ಪ್ಯಾಕೆಟ್ಗಳೊಂದಿಗೆ ಹಿಂದಿರುಗುವುದನ್ನು ಅವಳು ನೋಡುತ್ತಾಳೆ. ಅವಳು ತನ್ನ ಪಾಲನ್ನು ಪಡೆಯಲು ಓಡುತ್ತಾಳೆ, ಆದರೆ ಇಂದು ಅವರು ಅವಳನ್ನು ಒಂದು ತಟ್ಟೆಯ ಜೊತೆ ಸಾಲಿನಲ್ಲಿ ನಿಲ್ಲುವಂತೆ ಹೇಳುತ್ತಾರೆ. ಅವಳಿಗೆ ಅಸುಖಕರ ಮತ್ತು ಅವಮಾನವಾಗುತ್ತದೆ. ಅವಳ ಬದುಕು ಈ ಸ್ಥಿತಿಗೆ ಬಂದಿದೆಯೇ? ಮನೆಗೆ ಹಿಂದಿರುಗಿ ತನ್ನ ಮಕ್ಕಳನ್ನು ಸಾಲಿನಲ್ಲಿ ನಿಲ್ಲಲು ಕಳಿಸುತ್ತಾಳೆ. ರಾತ್ರಿ ಹೊತ್ತು ಆಕೆ ಏನನ್ನೂ ತಿನ್ನುವುದಿಲ್ಲ. ಎಚ್ಚರವಾದಾಗ ಪೌರಕಾರ್ಮಿಕರು ಕೆಲಸ ಮಾಡುತ್ತಿರುವುದನ್ನು ಕಾಣುತ್ತಾಳೆ. ಏಪ್ರಿಲ್ ತಿಂಗಳ ವೇತನವನ್ನು ಸ್ವೀಕರಿಸುತ್ತಾಳೋ ಇಲ್ಲವೋ ಎಂದು ಸರಿಯಾಗಿ ಗೊತ್ತಿಲ್ಲ.

"ನನಗೆ ಹಣ ನೀಡಿ ಎಂದು ಮೇಡಂ ಅವರನ್ನು ಹೇಗೆ ಕೇಳಲಿ? ನಾನು ಒಂದು ತಿಂಗಳ ಕಾಲ ಕೆಲಸ ಕೂಡ ಮಾಡಿಲ್ಲ." ಆದರೆ ತನ್ನ ಮಕ್ಕಳು ಆಹಾರಕ್ಕಾಗಿ ಸಾಲಿನಲ್ಲಿ ನಿಲ್ಲುವುದನ್ನು ನೆನಪಿಸಿಕೊಂಡಳು. ನಾಳೆ ಅವಳ ಮೇಡಂಗೆ ಕರೆ ಮಾಡಲು ನಿರ್ಧರಿಸಿದಳು.

ರಾತ್ರಿ 10 ಗಂಟೆ. ಅವಳ ಪತಿ ಇನ್ನೂ ಕುಳಿತು ಬೀದಿಯನ್ನು ನೋಡುತ್ತಿದ್ದಾನೆ. ಆಕೆಯ ಮಕ್ಕಳು ಫೋನ್ನಲ್ಲಿ ಆಟವಾಡುತ್ತಿದ್ದಾರೆ. ತನ್ನ ನೆರೆಹೊರೆಯವರ ಫೋನ್‌ನಲ್ಲಿ ಎಷ್ಟು ಮಂದಿ ಕಾರ್ಮಿಕರು ತಮ್ಮ ಹಳ್ಳಿಗಳಿಗೆ ಹಿಂತಿರುಗಲು ಪ್ರಾರಂಭಿಸಿದ್ದಾರೆಂದು ನೋಡುತ್ತಾಳೆ. ಅವಳ ಸೋದರ ಮಾವ ಕೂಡ ಆಗ್ರಾದಿಂದ ಹಳ್ಳಿಗೆ ನಡೆದರು. ಅವಳ ಹೊಟ್ಟೆಯಲ್ಲಿನ ಗಂಟು ಬಿಗಿಯಾಗುತ್ತದೆ.

ಮಧ್ಯರಾತ್ರಿಯ ಹೊತ್ತಿಗೆ ಅವಳು ಮಲಗದೆ ಎಚ್ಚರವಾಗಿರುತ್ತಾಳೆ. ಅವಳು ತನ್ನ ಗಂಡನನ್ನು ನೋಡುತ್ತಾಳೆ, ಅವನನ್ನು ಎಂದೂ ಇಷ್ಟು ಸ್ತಬ್ಧವಾಗಿರುವುದನ್ನು ಕಂಡಿಲ್ಲ. ಅವಳು ಕಣ್ಣು ಮುಚ್ಚಿದಾಗ, ಹೇಗೆ ದಿನದ ಕೆಲಸದ ನಂತರ ದಣಿವಿನಿಂದಾಗಿ ಮಲಗಿದಾಕ್ಷಣ ಗೊರಕೆ ಹೊಡೆಯುವುದನ್ನು ನೆನಪಿಸಿಕೊಳ್ಳುತ್ತಾಳೆ. ಆಗ ಮನಸ್ಸಿಗೆ ನೆಮ್ಮದಿಯಿತ್ತು, ಊಟದ ಭರವಸೆಯಿತ್ತು. ಕೆಲಸವಿತ್ತು, ಮತ್ತು ಆಕೆ ನೆಮ್ಮದಿಯಿಂದ ಮಲಗಬಹುದಾಗಿತ್ತು.

## ಕಾನೂನಿನ ಪ್ರಕಾರ

**2020 ರ ಮಾರ್ಚ್ 29 ರಂದು ಭಾರತ ಸರ್ಕಾರದ ಗೃಹ ಸಚಿವಾಲಯ ಬಿಡುಗಡೆ ಮಾಡಿದೆ:**


* ಲಾಕ್ ಡೌನ್ನಿಂದ ಸಿಕ್ಕಿಬಿದ್ದ ಕಾರ್ಮಿಕರಿಗೆ ತಾತ್ಕಾಲಿಕ ಆಶ್ರಯ, ಆಹಾರ ಮತ್ತು ಇತರ ಸರಬರಾಜುಗಳನ್ನು ರಾಜ್ಯವು ಖಚಿತಪಡಿಸಿಕೊಳ್ಳಬೇಕಾಗಿದೆ. ತಮ್ಮ ಮನೆಯಿಂದ ದೂರವಿದ್ದು ನಗರಗಳಲ್ಲಿ ಸಿಲುಕಿರುವ ವಲಸೆ ಕಾರ್ಮಿಕರಿಗೆ ಇದು ಅನ್ವಯಿಸುತ್ತದೆ.

*ಎಲ್ಲಾ ಉದ್ಯೋಗದಾತರು, ಕೈಗಾರಿಕೆಗಳು, ಕಾರ್ಖಾನೆಗಳು ಮತ್ತು ಗುತ್ತಿಗೆದಾರರು ತಮ್ಮ ಕೆಲಸದ ಸ್ಥಳವನ್ನು ಮುಚ್ಚಿದ ಅವಧಿಯಲ್ಲಿ ಕಾರ್ಮಿಕರಿಗೆ ನಿಗದಿತ ದಿನಾಂಕದಂದು ಯಾವುದೇ ಕಡಿತವಿಲ್ಲದೆ ವೇತನವನ್ನು ಪಾವತಿಸಬೇಕಾಗಿದೆ.

*ಆಶ್ರಯದ ಕೊರತೆಯಿದ್ದಲ್ಲಿ, ಅಗತ್ಯವಾದ ಆರೋಗ್ಯ ಪ್ರೋಟೋಕಾಲ್ಗಳನ್ನು ಖಾತ್ರಿಪಡಿಸಿದ ನಂತರ ರಾಜ್ಯವು ಕಾರ್ಮಿಕರಿಗೆ ಆಶ್ರಯ ನೀಡಬೇಕಾಗಿದೆ.

*ವಲಸಿಗರು ಸೇರಿದಂತೆ ಕಾರ್ಮಿಕರು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರೆ, ಭೂಮಾಲೀಕರು ಒಂದು ತಿಂಗಳ ಅವಧಿಗೆ ಬಾಡಿಗೆ ಪಾವತಿಸುವಂತೆ ಒತ್ತಾಯಿಸಬಾರದು. ಭೂಮಾಲೀಕರು ಬಲವಂತವಾಗಿ ಹೊರಹಾಕುವಿಕೆಯನ್ನು ಮಾಡುತ್ತಿದ್ದರೆ, ಅವರ ವಿರುದ್ಧ ಸಾಂಕ್ರಾಮಿಕ ರೋಗಗಳ ಕಾಯ್ದೆಯಡಿ ಕಾನೂನು ಕ್ರಮ ಕೈಗೊಳ್ಳಬಹುದಾಗಿದೆ.

*ಆರೋಗ್ಯ ಮತ್ತು ನೈರ್ಮಲ್ಯವನ್ನು ಕಾಪಾಡಲು ಕೈಗವಸುಗಳು, ಮುಖವಾಡಗಳು ಮತ್ತು ಹರಿಯುವ ನೀರು ಸೇರಿದಂತೆ ಅಗತ್ಯ ಆರೋಗ್ಯ ಮುನ್ನೆಚರಿಕೆಗಳು ಕಾರ್ಮಿಕರಿಗೆ ಸಿಗಬೇಕು.



# ನನಗೆ ಗೊತ್ತಿಲ್ಲ

*"ನೀವು ಎಲ್ಲಿನವರು?"*
*"ತ್ರಿಪುರ."*
*"ಇಲ್ಲಿ ಯಾಕೆ ಬಂದಿದ್ದೀರಾ?"*
*"ಮುಖವಾಡಗಳನ್ನು ತಯಾರಿಸಲು ಬಟ್ಟೆಯನ್ನು ಸಂಗ್ರಹಿಸಲು ಬಂದಿದ್ದೇವೆ"*
*"ನಿಮ್ಮಂತಹ ಜನರಿಂದ ಕರೋನಾ ವೈರಸ್ ಹರಡುತ್ತಿದೆ".*
*ಅವನು ಅವಳ ಮೇಲೆ ಉಗುಳಿದನು.*
*"ನಿನಗೆ ನಾವು ಪಾಠ ಕಲಿಸುವ ಮೊದಲು ನೀನು ಇಲ್ಲಿಂದ ತೊಲಗುವುದು ಒಳ್ಳೆಯುವುದು"*
*"ಆದರೆ ನಾನು ಕೇವಲ ಬಟ್ಟೆಯನ್ನು ಸಂಗ್ರಹಿಸಲು ಬಂದಿದ್ದೇನೆ."*

ಸ್ಥಳೀಯ ಹುಡುಗರ ಗುಂಪೊಂದು ಅವಳ ಬೆನ್ನಟಿತು. ಅವರು ಮಾರುಕಟ್ಟೆ ತಲುಪಿದ ನಂತರ, ಖಾಲಿ ಬಂಡಿಗಳ ಹಿಂದೆ ಅವಳು ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾದಳು.

ಅಂದಿನಿಂದ ಅವಳು ಮನೆಯಿಂದ ಹೊರಗೆ ಹೆಜ್ಜೆ ಹಾಕಿಲ್ಲ. ಆಕೆ ಗಾರ್ಮೆಂಟ್ ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡುತ್ತಾಳೆ, ಅದೀಗ ಲಾಕ್ಡೌನ್‌ನಿಂದಾಗಿ ಮುಚ್ಚಿದೆ. ಇಂತಹ ಸಮಯದಲ್ಲಿ ಯೂನಿಯನ್ ಜೊತೆ ಮುಖವಾಡ ಮಾಡುವುದರಿಂದ ಆಕೆಗೆ ಸಹಾಯವಾಗುತ್ತದೆ. ಅವಳು ಈ ಘಟನೆಯಿಂದ ಕೋಪಗೊಂಡಿದ್ದರೂ ಆ ಏರಿಯಾದ ಕಡೆಗೆ ಮತ್ತೊಮ್ಮೆ ಹೋಗಿಲ್ಲ. "ನನ್ನವರು ಇಲ್ಲಿ ಯಾರೂ ಇಲ್ಲ. ವಿಷಯ ಹದಗೆಟ್ಟಿದರೆ ನನ್ನ ಪರವಾಗಿ ಯಾರು ಮಾತನಾಡುತ್ತಾರೆ? ನಾವಿಲ್ಲಿ ಕೆಲಸ ಮಾಡಲು, ದುಡಿಯಲು ಬಂದಿದ್ದೇವೆ, ಇಂತಹ ಜಗಳಗಳಲ್ಲಿ ಸಿಲುಕಿಕೊಳ್ಳಲು ನಮ್ಮ ಬಳಿ ಸಮಯವಿಲ್ಲ".

ಬೆಂಗಳೂರಿನ ಎಲ್ಲಾ ಗಾರ್ಮೆಂಟ್ ಫ್ಯಾಕ್ಟರಿಗಳನ್ನು ಲಾಕ್ಡೌನ್‌ನಿಂದಾಗಿ ಮುಚ್ಚಲಾಗಿದೆ. ಫ್ಯಾಕ್ಟರಿಯ ಗೇಟಿನಲ್ಲಿ ಹಾಳೆಯೊಂದು ಅಂಟಿಸಿದ್ದು, ಅದರ ಮೇಲೆ ಫ್ಯಾಕ್ಟರಿಯ ಪುನರಾರಂಭದ ದಿನಾಂಕವಿದ್ದು, ಅದನ್ನು ಪದೇ ಪದೇ ಮುಂದೂಡಲಾಗುತ್ತಿದೆ. ಕಾರ್ಮಿಕರಿಗೆ ಇದೊಂದೇ ಸುದ್ದಿಯ ಮೂಲ. ಅವರ ಬಳಿಯಿರುವುದು ಫ್ಯಾಕ್ಟರಿಯ ಲ್ಯಾಂಡ್‌ಲೈನ್ ಮಾತ್ರ. ಹೀಗಾಗಿ ಇತ್ತೀಚಿಗೆ ಯಾವುದೇ ಪ್ರಶ್ನೆ ಕೇಳಿದರೂ ಅವರ ಬಳಿಯಿರುವ ಉತ್ತರ, 'ನನಗೆ ಗೊತ್ತಿಲ್ಲ'.

"ಏಪ್ರಿಲ್ ತಿಂಗಳ ವೇತನ ನಿಮಗೆ ಸಿಗುತ್ತದೆಯೇ? ಕಂಪನಿಯಿಂದ ರೇಷನ್ ಸಿಗುತ್ತದೆಯೇ? ಫ್ಯಾಕ್ಟರಿ ಮತ್ತೆ ಯಾವಾಗ ತೆರೆಯುತ್ತದೆ? ನೀವು ಮನೆಗೆ ಹೋಗ ಬಯಸುತ್ತೀರಾ? ನೀವು ಹೇಗೆ ಜೀವನ ಸಾಗಿಸುತ್ತಿದ್ದೀರಿ?""ನನಗೆ ಗೊತ್ತಿಲ್ಲ." ಮಾಹಿತಿಯ ಕೊರತೆಯಿಂದ ವದಂತಿಗಳು ಹರಡುತ್ತಿವೆ. ಲಾಕ್‌ಡೌನ್‌ನ ನಂತರ 50% ಕೆಲಸಗಾರರನ್ನು ವಜಾಗೊಳಿಸಲಾಗುವುದೆಂದೂ, ಲಾಕ್ಡೌನ್ ನಂತರ ಮನೆಗೆ ಹೋಗಲು ಇಚ್ಛಿಸುವವರು ಕೆಲಸವನ್ನು ಬಿಡಬೇಕಾದೀತು ಎಂದು. ಅವರ ಹಳ್ಳಿಗಳ ಪಂಚಾಯತ್, ಪಟ್ಟಣಗಳಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರನ್ನು ನೋಂದಾಯಿಸುತ್ತಿದ್ದು, ಅವರು ಮನೆಗೆ ಹಿಂದರುಗದಿದ್ದಲ್ಲಿ, ಅವರನ್ನು ಮತ್ತೆಂದೂ ಹಳ್ಳಿಯೊಳಗೆ ಬಿಡಲಾಗುವುದಿಲ್ಲ.

ಈ ವದಂತಿಗಳ ನಡುವೆ ಕೆಲಸಗಾರರಲ್ಲಿ ಕೆಲಸ ಕಳೆದುಕೊಳ್ಳುವ ಭಯವಿದೆ. ಕೆಲವು ಕೆಲಸಗಾರರು ಲಾಕ್ಡೌನ್ನ ನಂತರ ಹಳ್ಳಿಗಳಿಗೆ ಹಿಂದಿರುಗಲು ನಿರ್ಧರಿಸಿದ್ದಾರೆ, "ಫ್ಯಾಕ್ಟರಿಯಲ್ಲಿ ಇಷ್ಟೊಂದು ಜನ ಕೆಲಸ ಮಾಡುತ್ತಿದ್ದು, ಬಟ್ಟೆಯೊಂದು ಅದೆಷ್ಟು ಕೈಗಳ ನಡುವೆ ಹಾದುಹೋಗುತ್ತದೆಯೋ. ವೈರಸ್ ಹರಡುವ ಹೆಚ್ಚಿನ ಅವಕಾಶ ಇಲ್ಲಿದೆ. ನಮಗೆ ವೈರಸ್ ತಗುಲಿದರೆ ನಮ್ಮ ಚಿಕಿತ್ಸೆಗೆ ಯಾರು ಹಣ ಕಟ್ಟುತ್ತಾರೆ? ಮನೆಗೆ ಹೊರಡುವುದೇ ಲೇಸು." ಕಂಪನಿಯ ಆಡಳಿತದಿಂದ ರೇಷನ್ ಅಥವಾ ಆಹಾರಕ್ಕಾಗಿ ಸಹಾಯ ದೊರಕಿಲ್ಲ. ಮಾರ್ಚ್ ತಿಂಗಳ ವೇತನವನ್ನು ನೀಡಲಾಗಿದೆ. ಹೆಚ್ಚಿನ ವಲಸೆ ಕೆಲಸಗಾರರಿರುವ ಹಾಸ್ಟೆಲ್‌ಗಳಲ್ಲಾದರೂ ರೇಷನ್ ಹಂಚುವಂತೆ ಗಾರ್ಮೆಂಟ್ ಕೆಲಸಗಾರರ ಯೂನಿಯನ್ ಕಂಪನಿಯ ಆಡಳಿತದೊಂದಿಗೆ ಮನವಿ ಮಾಡಿತು. ಆದರೆ ಆಡಳಿತ ಹುಸಿಮಾತುಗಳನ್ನಾಡಿತು. ಯೂನಿಯನ್ನವರು ಅವರಾಗಿಯೇ ಹಾಸ್ಟೆಲ್ಗೆ ರೇಷನ್ ತರಿಸಿದಾಗ, ಕೆಲಸಗಾರರು ಯೂನಿಯನೊಂದಿಗಿನ ಸಹವಾಸ ಬೇಡೆಂದು ಅದನ್ನು ನಿರಾಕರಿಸಿದರು. ಏಕೆಂದರೆ ಅವರು ಹಾಸ್ಟೆಲ್ನ ವಾರ್ಡನ್ ಮತ್ತು ಆಡಳಿತವನ್ನು ಕುಪಿತಗೊಳಿಸದರೆ ತಮ್ಮ ಕೆಲಸ ಕಳೆದುಕೊಳ್ಳುತ್ತೇವೆ ಎಂಬ ಭಯ ಕೆಲಸಗಾರರಿಗಿದೆ.

ದಿನರಾತ್ರಿ ಬಿಡುವಿಲ್ಲದೆ ಮಷೀನ್‌ಲ್ಲಿ ಕೆಲಸ ಮಾಡುವ, ಜಿಪ್ಗಳನ್ನು ಹೊಲೆಯುವ, ಬಟನ್ಗಳನ್ನು ಕೂಡಿಸುವ ಕೈಗಳು ಈಗ ನಿಷ್ಕ್ರಿಯವಾಗಿವೆ. ಒಂದೊಂದು ನಿಮಿಷವನ್ನೂ ಲೆಕ್ಕಕಿಟ್ಟು, ಶೌಚಾಲಯ ಅಥವಾ ಚಹಾ ಬ್ರೇಕ್ ಕೂಡ ಸಿಗದಿರುವ ಕೆಲಸಗಾರರ ಬಳಿ ಈಗ ಸಾಕಷ್ಟು ಸಮಯವಿದೆ. ಇಂತಹ ಸಮಯದಲ್ಲಿ, ಹಾಸ್ಟೆಲ್ನಲ್ಲಿ ಸಿಲುಕಿ, ವಾಟ್ಸಾಪ್ ಮತ್ತು ಯೂಟ್ಯೂಬ್ ವೀಡಿಯೋ ನೋಡುವಾಗ ಅವರ ಬಳಿ ಇರುವುದು ಒಂದೇ ಉತ್ತರ "ನನಗೆ ಗೊತ್ತಿಲ್ಲ".

ಈ ಲೇಖನವನ್ನು ಕರ್ನಾಟಕ ಗಾರ್ಮೆಟ್ ಕಾರ್ಮಿಕರ ಯೂನಿಯನ್‌ನೊಂದಿಗೆ ಸಂಬಂಧಿಸಿದ ವಲಸೆ ಕಾರ್ಮಿಕರ ಜೊತೆಗಿನ ಸಂಭಾಷಣೆಯನ್ನು ಆಧರಿಸಿ ಬರೆಯಲಾಗಿದೆ.

# ಶ್ರದ್ಧಾಂಜಲಿ

## ಅಂತ್ಯವಿಲ್ಲದ ನಡಿಗೆ

ಬಿಸಿಲಿನಲ್ಲಿನ ಮರೀಚಿಕೆಯಂತೆ ಮನೆ ದೂರದಲ್ಲಿದೆ. ಅವಳಿಗೆ ಬಹಳ ದೂರ ನಡೆದು ಅಭ್ಯಾಸವಿತ್ತು. ಬಸ್ ಹಿಡಿಯಲಿಕ್ಕಾಗಿ, ಆರೋಗ್ಯ ತಪಾಸಣೆಗಾಗಿ, ಕೆಲಸಕ್ಕಾಗಿ. ಕೆಲವೊಮ್ಮೆ ಮನಸ್ಸನ್ನುನಿರ್ಮಲಗೊಳಿಸಲು ಒಂದು ನಡಿಗೆ ಅಗತ್ಯವಾಗಿತ್ತು. ಬೇಸಿಗೆಯ ಸುಡುಸುಡು ಬಿಸಿಲಿನಲ್ಲಿ ರಸ್ತೆಬದಿಯ ಪಕ್ಕದಲ್ಲಿ ಮಲಗಿದವಳನ್ನು ಕಂಡುಹಿಡಿದದ್ದು ಒಂದು ಕುಟುಂಬ. ಅವಳು ಇನ್ನೂ ನಡೆಯುತ್ತಿದ್ದಳು, ಅವಳ ಮನಸ್ಸಿನಲ್ಲಿ ಅವಳ ತಾಯಿಯ ಧ್ವನಿ ಕೇಳಿಸಿತು. ಅವರು ಅವಳನ್ನು ಎಚ್ಚರಗೊಳಿಸಲು ಪ್ರಯತ್ನಿಸಿದರು. ದಾರಿಹೋಕರನ್ನು, ಪೊಲೀಸರನ್ನು ಕರೆದರು. ಮಲಿನವಾಗುವ ಭಯದಿಂದ ಪೊಲೀಸರು ಅವಳನ್ನು ಮುಟ್ಟಲು ನಿರಾಕರಿಸಿದರು. ಅವಳ ದೇಹದ ಸುತ್ತಲೂ ಒಂದು ಗುಂಪು ಸೇರಿಕೊಂಡಿತು. ಅವಳು ತನ್ನ ಹಳ್ಳಿಯನ್ನು ತಲುಪಿದಳು, ತನ್ನ ನೆರೆಹೊರೆಯವರಿಗೆ ಶುಭಾಶಯ ಕೋರಿದಳು. ಅವಳನ್ನು ಕಂಡುಹಿಡಿದ ಕುಟುಂಬವು ಅವಳ ದೇಹವನ್ನು ಅವರು ಬಳಿ ಇದ್ದ ಏಕೈಕ ಬಟ್ಟೆಯಿಂದ ಮುಚ್ಚಿದರು. ಆಂಬ್ಯುಲೆನ್ಸ್ ಬರುವವರೆಗೂ ಅವರು ಅವಳೊಂದಿಗೆ ಕಾದರು. ಅವಳು ತನ್ನ ಮನೆಯೊಳಗೆ ಇದ್ದಳು. ಅವಳ ಮಕ್ಕಳು ಎಷ್ಟು ಎತ್ತರ ಬೆಳೆದಿದ್ದಾರೆ! ಅವಳ ತಾಯಿಗೆ ಕರೆ ಬಂತು. ಅವಳ ಸಾವನ್ನು ಘೋಷಿಸಲಾಯಿತು. ಅವಳ ಕುಟುಂಬಕ್ಕೆ ಅಂತ್ಯಕ್ರಿಯೆಗೆ ಬರಲು ಹಣವಿಲ್ಲ. ಅವಳು ಸಿಹಿಯಾದ ಚಹಾ ಕುಡಿಯುತ್ತಿದ್ದಾಳೆ. ತಾಯಿ ಅವಳ ನೆಚ್ಚಿನ ಖಾದ್ಯವನ್ನು ತಯಾರಿಸುತ್ತಿದ್ದಾಳೆ. ಅವಳು ಅಪರಿಚಿತರ ಮಧ್ಯೆ ಸಾಯುತ್ತಿದ್ದಾಳೆ. ಇತರರಂತೆ, ಅವಳು ನಗರವನ್ನು ಬಿಟ್ಟು ಮನೆಯತ್ತ ಹೋಗುವಂತಾಯಿತು. ಸಂಜೆಯಂದು ತನ್ನ ನೆರೆಹೊರೆಯವರೊಂದಿಗೆ ಮಾತನಾಡುತ್ತಿದ್ದಾಳೆ. ಅವಳ ಬಳಿ ನಗರದಲ್ಲಿನ ಹಲವಾರು ಕಥೆಗಳಿವೆ. ಹಾಳಾದ್ ಗುತ್ತಿಗೆದಾರ! ಸುದ್ದಿವಾಹಿನಿಗಳಲ್ಲಿ ಅವಳ ಒಂದು ಸಣ್ಣ ಉಲ್ಲೇಖವಿದೆ. ಅವರಿಗೆ ಅವಳ ಹೆಸರು ತಿಳಿದಿಲ್ಲ. ಸರ್ಕಾರ ಪರಿಹಾರ ನೀಡುವ ಭರವಸೆ ನೀಡಿದೆ. ಅವಳಂತಹ ಇತರರು ನಡೆಯುತ್ತಲೇ ಇದ್ದಾರೆ. ಬಿಸಿಲಿನಲ್ಲಿನ ಮರೀಚಿಕೆಯಂತೆ ಮನೆ ದೂರದಲ್ಲಿದೆ.

***ಲಾಕ್ ಡೌನ್ ನಿಂದಾಗಿ ನಗರದಲ್ಲಿನ ವಲಸೆ ಕಾರ್ಮಿಕರಿಗೆ ಮನೆಯು ದೂರದಲ್ಲಿದೆ. ಇವರು ಇಷ್ಟು ದೂರದ ದಾರಿ ನಡೆದಿರುವುದು ಇದು ಮೊದಲ ಬಾರಿಯೇನು ಅಲ್ಲ. ಆದರೆ ಬಹುಷಃ ಮೊದಲ ಬಾರಿಗೆ ಇದು ಸಾರ್ವಜನಿಕವಾಗಿ ಗುರುತಿಸಲ್ಪಟ್ಟಿದೆ. ಮನೆಗೆ ತಲುಪುವ ದಾರಿಯಲ್ಲಿ ಜೀವ ಕಳೆದುಕೊಂಡ ಕೆಲಸಗಾರರಿಗೆ ಈ ಶ್ರದ್ಧಾಂಜಲಿಯನ್ನು ಸಮರ್ಪಿಸಲಾಗಿದೆ.**

# ನಮ್ಮ ಗಿಫ್ಟ್ ಯಾವಾಗ ಸಿಗುತ್ತದೆ?

“ಬೀದಿಯಲ್ಲಿ ಕೆಲಸ ಮಾಡುತ್ತಿರುವವರು ನಾವು ಮಾತ್ರ ಎಂದು ನಿಮಗೆ ತಿಳಿದಿದೆಯೇ? ಲಾಕ್ ಡೌನ್ ಶುರುವಾದಾಗಿನಿಂದ ಒಂದು ದಿನದ ರಜೆಯೂ ಇಲ್ಲ. ಪ್ರತಿದಿನ ಬೆಳಿಗ್ಗೆ 6.30 ರಿಂದ 10:30 ರವರೆಗೆ. ವೈರಸ್‌ನ ಸಮಯದಲ್ಲಿ ಎಲ್ಲರ ಕಸ ಮುಸುರೆ ಎತ್ತುವ ನಾವು, ರಸ್ತೆ ಗುಡಿಸುವ ನಾವು, ಮನೆಯಿಂದ ಹೊರಬರುವ ನಾವು ಧೈರ್ಯವಂತರಲ್ಲವೇ? ನೀವು ಮಾಡಬಲ್ಲಿರಾ?” ಎಂದು ಮೀನಾ ಸವಾಲು ಹಾಕುತ್ತಾಳೆ. ಸಂಜೆ ತನ್ನ ಫೋನ್ ಅನ್ನು ಸ್ವಿಚ್ ಆಫ್ ಮಾಡುತ್ತಾಳೆ, ಅವಳ ಸ್ನೇಹಿತೆಯರೆಲ್ಲಾ ಸರ್ಕಾರ ‘ಮಾತುಕೊಟ್ಟಿರುವ ಗಿಫ್ಟ್’ ಬಗ್ಗೆ ಕೇಳುತ್ತಾರೆಂದು. “ಮೋದಿ ಅಥವಾ ಯಡ್ಡಿ ಈ ಉಡುಗೊರೆಯನ್ನು ಘೋಷಿಸಿರುವರೇ ಅಥವಾ ಇದೊಂದು ವದಂತಿಯೇ? ಏನೇ ಆದರೂ ಇದು ವೈರಸ್ ತರಹ ಹರಡುತ್ತಿದೆ”ಎಂದು ಆಕೆ ಎಲೆ ಅಡಕೆ ಅಗಿಯುತ್ತಾ ನಗುತ್ತಾಳೆ.

ಬೆಳಿಗ್ಗೆ 4:30ಗೆ ಎದ್ದು, 5:30ಗೆ ತಯಾರಾಗಿ, ಸ್ನೇಹಿತರೊಡನೆ ಗುಂಪುಗೂಡಲು ಆಟೋ ಸ್ಟಾಂಡ್ ಬಳಿ ಕಾಯುತ್ತಾರೆ, ಆನಂತರ ಕೆಲಸಕ್ಕೆ ಹೋಗುತ್ತಾರೆ. “ನಮ್ಮ ಹಾಜರಾತಿಯನ್ನು ನೋಂದಾಯಿಸುವ ಬಯೋಮೆಟ್ರಿಕ್ ನಿಂತಿದೆ. ಈಗ ನಾವು ನಮ್ಮ ಮಾಸ್ಕ್ ಮತ್ತು ಗ್ಲವ್ಸ್ ಧರಿಸಿರುವ ಮುಖದ, ಒಂದು ಮೀಟರ್ ದೂರ ನಿಂತಿರುವ ಚಿತ್ರವನ್ನು ತೆಗೆಯುತ್ತೇವೆ. ಹೀಗೆ ಮಾಡಿದರೆ ಮಾತ್ರ ರಾಜ್ಯಕ್ಕೆ ನಾವು ಕೆಲಸಮಾಡುತ್ತಿದ್ದೇವೆ ಎಂದು ಭರವಸೆ ಬರುತ್ತದೆ.” “ವಿದ್ಯಾವಂತರಿಗೇನು ತಲೆಕೆಟ್ಟಿದೆಯೇ? ಕಸ ವಿಂಗಡನೆ ಮಾಡಲು ಜನ ಯಾವಾಗ ಕಲಿಯುತ್ತಾರೆ?” ಇಂತಹ ಸಮಯದಲ್ಲೂ ಪೌರಕಾರ್ಮಿಕರು ಲೋಳೆ ತುಂಬಿದ ಅಸ್ಪೃಶ್ಯತೆ, ಸ್ಯಾನಿಟರಿ ಪ್ಯಾಡ್‌ಗಳು, ಔಷಧೀಯ ತ್ಯಾಜ್ಯ ಮತ್ತು ಎಂಜಲಿನ ಮಧ್ಯೆ ಕೆಲಸ ಮಾಡಬೇಕಾಗಿದೆ. ತ್ಯಾಜ್ಯದ ರಾಶಿ ಇನ್ನೂ ಮೂಲೆಗಳಲ್ಲಿ ಕಾಣುತ್ತವೆ. ಲಾಕ್‌ಡೌನ್‌ನಿಂದಾಗಿ ಎಲ್ಲೆಂದರಲ್ಲಿ ಯಾರ ಕಣ್ಣಿಗೂ ಕಾಣದೇ ಕಸ ಎಸೆಯುವುದು ಸುಲಭವಾಗಿದೆ.

“ನಾವು ಪೌರಕಾರ್ಮಿಕರಿಗಾಗಿ ವಾಸಿಸುತ್ತೇವೆಂದು ನಿಮಗೆ ಗೊತ್ತೇ? ನಮ್ಮಲ್ಲಿ ಒಬ್ಬರನ್ನು ವೈರಸ್ ಮುಟ್ಟಿದರೂ ಇಡೀ ಸ್ಲಂಗೆ ಹರಡುವ ಸಾಧ್ಯತೆಯಿದೆ. ಟಿಶ್ಯು ಪೇಪರ್ ಉಪಯೋಗಿಸುವವರಿಂದ ಹೆಚ್ಚಾಗಿ ವೈರಸ್ ಅಂಟುವುದು ನಮ್ಮಂತವರಿಗೆ. ವಿದ್ಯಾವಂತರು ಯಾಕೆ ಹೀಗೆ ಸ್ವಾರ್ಥಿಗಳಾಗಿದ್ದಾರೆ? ಅಸ್ಪೃಶ್ಯತೆ ಹೇಗಿರುತ್ತದೆಂದು ತೋರಿಸುವ ಬಾರಿ ಈಗ ನಮ್ಮದಾಗಿದೆ. ನಾವು ಅವರಿಗೆ ಸ್ಪಷ್ಟವಾಗಿ ಹೇಳುತ್ತೇವೆ - ನೀವು ವಿಂಗಡಿಸಲಿಲ್ಲವೆಂದರೆ ನಾವು ಅದನ್ನು ಮುಟ್ಟುವುದಿಲ್ಲ. ದಯವಿಟ್ಟು ನಿಯಮಗಳನ್ನು ಪಾಲಿಸಿ” ಎಂದು ಕಟುವಾಗಿ ಹೇಳಿದ್ದಾರೆ.

ಬಸ್‌ಗಳು ಪೌರಕಾರ್ಮಿಕರಿಗೆ ನಿಲ್ಲುವುದಿಲ್ಲ, ಆಟೋ ದರ ಹೆಚ್ಚಿದೆ, 5-6 ಜನರು ಒಂದೇ ಆಟೋದಲ್ಲಿ ಇಕ್ಕಟ್ಟಿನಲ್ಲಿ ಕುಳಿತು ಕೆಲಸಕ್ಕೆ ಹಾಜರಾಗಬೇಕಾಗಿದೆ. ಲಾಕ್‌ಡೌನ್‌ನ ನಂತರ 8 ಗಂಟೆಯ ಕೆಲಸ 4-ಗಂಟೆಗೆ ಇಳಿದಿದೆ, ಆದರೆ ಕೆಲಸ ಮಾಡುಲಿರುವುದು ಅಷ್ಟೇ. “ಸಾರಿಗೆಯ ಪೌರಕಾರ್ಮಿಕರನ್ನು ವ್ಯವಸ್ಥೆಯಿಲ್ಲದಿದ್ದರೆ ನಾವು ನಡೆದುಕೊಂಡು ಹೋಗುತ್ತೇವೆ. ಶೌಚಾಲಯಕ್ಕೆ ಹೋಗಬೇಕಾದೀತು ಎಂದು ನೀರು ಕುಡಿಯುವುದಿಲ್ಲ. ನಮ್ಮ ಏರಿಯಾದಿಂದ ದೀರ್ಘ ನಡಿಗೆಯ ದಾರಿಯಿದು. 4 ಗಂಟೆಯ ಕೊನೆಯಲ್ಲಿ ನಾವು ಪೂರ್ಣವಾಗಿ ದಣಿದಿರುತ್ತೇವೆ. ಚಹಾದ ಎಲ್ಲಾ ಅಂಗಡಿಗಳು ಮುಚ್ಚಿರುತ್ತವೆ. ನಮ್ಮನ್ನು ನಿವಾರಿಸಿಕೊಳ್ಳಲು ಮನೆ ತಲುಪಬೇಕು, ತಲುಪಿದ ನಂತರ ನಮ್ಮ ದಿನದ ಮೊದಲ ಊಟವನ್ನು ಸಂಜೆ 2-3 ಗಂಟೆಗೆ ಮಾಡುತ್ತೇವೆ.”

ಬೆಂಗಳೂರಿನಲ್ಲಿ ಹಲವಾರು ಏರಿಯಾಗಳನ್ನು ‘ಹಾಟ್ ಸ್ಪಾಟ್’ ಎಂದು ಗುರುತಿಸಲಾಗಿದೆ. ಒಳಗಿರುವವರು ಹೊರಗೆ ಬರುವಂತಿಲ್ಲ, ಹೊರಗಿನವರು ಒಳಗೆ ಬರುವಂತಿಲ್ಲ, ಆದರೆ ಪೌರಕಾರ್ಮಿಕರು ಮಾತ್ರ ಈ ಹಾಟ್‌ಸ್ಪಾಟ್‌ಗಳಲ್ಲಿ ಕೆಲಸ ಮಾಡುತ್ತಲೇ ಇರಬೇಕು. ಎಲ್ಲದರ ದರ ಹೆಚ್ಚುತ್ತಿದ್ದರೂ ನಮ್ಮ ವೇತನ ಮಾತ್ರ ಮೊದಲಿನಹಾಗೆಉಳಿದಿದೆ.“ಹಾಲು,ಗ್ಯಾಸ್,ತರಕಾರಿ, ಬೇಳೆ, ಮತ್ತು ಅಕ್ಕಿ. ನಮ್ಮ ಮಕ್ಕಳಿಗೆ ಸರಿಯಾಗಿ ಊಟ ಮಾಡಲಿಸಲಾಗುತ್ತಿಲ್ಲ. ಲಾಕ್‌ಡೌನ್‌ನಿಂದ ಮಕ್ಕಳು ಬೇಸತ್ತು ಸಿಡಿಮಿಡಿಗೊಳ್ಳುತ್ತಾರೆ. ಬಿಸ್ಕತ್ತು, ಚಿಪ್ಸ್, ಚಾಕಲೇಟುಗಳನ್ನು ಕೇಳುತ್ತಲೇ ಇರುತ್ತಾರೆ. ಮರುಬಳಕೆಯ ತ್ಯಾಜ್ಯವನ್ನು ಮಾರಿ ಸಿಗುವ ಸ್ವಲ್ಪ ಹಣವನ್ನು ಇಂತಹ ಚಿಕ್ಕ-ಪುಟ್ಟ ಖರ್ಚುಗಳಿಗಾಗಿ ಉಪಯೋಗಿಸುತ್ತಿದ್ದೆವು. ಲಾಕ್‌ಡೌನ್‌ನಿಂದ ಅದುವೂ ಈಗ ಸಾಧ್ಯವಿಲ್ಲ. ಇನ್ನು ಬಾಡಿಗೆ ಮತ್ತು ಮತ್ತೆ ತೆರೆಯಲಿರುವ ಶಾಲೆ. ಶುಲ್ಕ, ಶೂ, ಸಾಕ್ಸ್, ಸಮವಸ್ತ್ರಗಳಿಗೆ ದುಡ್ಡು ಕಟ್ಟಬೇಕು. ಭವಿಷ್ಯ ಅಸಾಧ್ಯವಾಗಿರುವಂತೆ ಕಾಣುತ್ತದೆ, ಆದರೆ ನಾವು ಪ್ರತಿದಿನ ಬದುಕಲು ಪ್ರಯತ್ನಿಸುತ್ತಿದ್ದೇವೆ.”30 ವರ್ಷಗಳಿಂದ ಕೆಲಸ ಮಾಡಿದ ಪೌರಕರ್ಮಿಕರನ್ನು ಪಿಂಚಣಿ ಅಥವಾ ಸವಲತ್ತುಗಳಿಲ್ಲದೆ ನಿರ್ದಾಕ್ಷಿಣ್ಯವಾಗಿ ಕೆಲಸದಿಂದ ವಜಾಗೊಳಿಸಿದ್ದಾರೆ. “ಬೇರೆ ಜಾತಿಯ ಜನರು ನಮ್ಮ ಕೆಲಸವನ್ನು ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಕೆಲಸವನ್ನು ಮೊದಲು ನಮ್ಮ ಮಕ್ಕಳಿಗೆ ನೀಡಬೇಕು ಇಲ್ಲವಾದರೆ ನಾವು ಹೇಗೆ ಬದುಕಲು ಸಾಧ್ಯ?”

ಎಂದು ಕಳೆದ 30 ವರ್ಷಗಳಿಂದ ತ್ಯಾಜ್ಯ ಆರಿಸುವವರಾಗಿ ಕೆಲಸ ಮಾಡಿರುವ ಮುನಿಯಪ್ಪ ಪ್ರಶ್ನಿಸುತ್ತಾರೆ. ಒಳಚರಂಡಿ ಮತ್ತು ಕಸದ ದುರ್ವಾಸನೆಯೊಂದಿಗೆ ಕೆಲಸ ಮಾಡಬೇಕಾದವರಿಗೆ ಮದ್ಯಪಾನ ಅಭ್ಯಾಸವಾಗಿದೆ; ಬಾರ್‌ಗಳು ಮುಚ್ಚಿರುವುದರಿಂದ ಅವರಿಗೆ ಕೆಲಸ ಮಾಡುವುದು ಈಗ ಕಷ್ಟವಾಗಿದೆ. ಆದರೆ ಹೆಂಗಸರೆಲ್ಲರೂ ಖುಷಿಗೊಂಡಿದ್ದಾರೆ. “ವೈರಸ್‌ನಿಂದಾದ ಎಲ್ಲಕ್ಕಿಂತ ಒಳ್ಳೆಯ ಕೆಲಸವಿದು. ಈಗ ಹೇಗೆ ಕೆಲಸ ಮಾಡುತ್ತಿದ್ದಾರೆ? ಅದು ಯಾವಾಗಲೂ ಒಂದು ನೆಪವಾಗಿತ್ತಷ್ಟೆ. ಅವರು ಕುಡಿಯದೆ ಕೆಲಸ ಮಾಡುವವರೆಗೆ ಬಾರ್ ಗಳನ್ನು ಮುಚ್ಚಬೇಕು. ನಮ್ಮನ್ನು ಅವರ ಕೋಪದಿಂದ ಕಾಪಾಡುತ್ತದೆ. ಈಗ ಸರಿಯಾಗಿ ನಿದ್ದೆಯಾದರೂ ಮಾಡಬಹುದಾಗಿದೆ.” ಪೌರಕಾರ್ಮಿಕರಿಂದ ನಿವಾಸಿಗಳಲ್ಲಿ ಒಂದು ಮನವಿಯೆಂದರೆ, ದಯವಿಟ್ಟು ಮನೆಯಲ್ಲಿರಿ ಎಂದು. “ಹೊರಗೆ ಬಂದು ಗಾಳಿಯನ್ನು ಮಲಿನಗೊಳಿಸಬೇಡಿ. ನಮ್ಮನ್ನು ನೆಮ್ಮದಿಯಿಂದ ಕೆಲಸ ಮಾಡಲು ಬಿಡಿ. ಹಾಗು ಪ್ರಿಯ ಸರ್ಕಾರವೇ, ನಮ್ಮ ವೇತನವನ್ನು ಸರಿಯಾದ ಸಮಯಕ್ಕೆ ನೀಡಿರಿ, ಇಲ್ಲಾವಾದರೆ ನಾವು ರಸ್ತೆಯನ್ನು ಗುಡಿಸುವುದಿಲ್ಲ. ಹಾಗು ನಮ್ಮ ಉಡುಗೊರೆಯನ್ನು ಮರೆಯಬೇಡಿ.” ಎಂದು ಮೀನಾ ಬೀಡಿಗೆ ಸುಣ್ಣ ಸವರುತ್ತಾ ನಗುತ್ತಾರೆ.

